# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 Volume:01 • ಸಂಚಿಕೆ:286 Issue:286 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 12.04.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2







## ಬಂದಿದೆ ಮತದಾನದ ಅವಕಾಶ, ನಿರ್ಲಕ್ಷಿಸಿ ನಿರಾಶರಾಗಬೇಡಿ






# ಇಂದಿನಿಂದ ನಾಮಪತ್ರ ಸಲ್ಲಿಕೆ ಆರಂಭ

### ಏ.12 ರಿಂದ ಏ.19ವರೆಗೆ ಸಲ್ಲಿಕೆ | ಜಿಲ್ಲಾಧಿಕಾರಿಗಳ ಕಚೇರಿ ಸುತ್ತಮುತ್ತ ನಿಷೇಧಾಜ್ಞೆ ಜಾರಿ | ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ (ಪ.ಪಂ) ಲೋಕಸಭಾ ಮೀಸಲು ಕ್ಷೇತ್ರದಲ್ಲಿ ಮೇ 07 ರಂದು ನಡೆಯಲಿರುವ ಚುನಾವಣೆಗೆ ಏ.12 ರಂದು ಅಧಿಸೂಚನೆ ಪ್ರಕಟಗೊಳ್ಳಲಿದ್ದು ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಪ್ರಾರಂಭವಾಗಲಿದೆ, ಏ.19 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ಗುರುವಾರ ಜಿಲ್ಲಾಡಳಿತ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ 09–ಬಳ್ಳಾರಿ(ಪ.ಪಂ) ಲೋಕಸಭಾ ಕ್ಷೇತ್ರದ ಅಧಿಸೂಚನೆ ಪ್ರಕಟ ಸಂಬಂಧ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.



ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಎರಡನೇ ಶನಿವಾರ ಮತ್ತು ಭಾನುವಾರ ಹೊರತುಪಡಿಸಿ, ಇನ್ನುಳಿದ ದಿನಗಳಲ್ಲಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 03 ಗಂಟೆಯವರೆಗೆ ಏ.19 ರವರೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಬಹುದು. ಏ.20 ರಂದು ಅಭ್ಯರ್ಥಿಗಳು ಸಲ್ಲಿಸಿದ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಏ.22 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ ಎಂದು ಹೇಳಿದರು.

ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಕ್ರಮಬದ್ಧ ನಾಮಪತ್ರ ಸಲ್ಲಿಸಬೇಕು, ಈಗಾಗಲೇ ಜಿಲ್ಲಾಧಿಕಾರಿಗಳ ಕಚೇರಿಯ ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ 144ರ ಸೆಕ್ಷನ್ ಕಾಯ್ದೆ ಜಾರಿ ಮಾಡಿದೆ. ನಾಮಪತ್ರ ಸಲ್ಲಿಸುವ ಉಮೇದುವಾರರೊಂದಿಗೆ 4 ಮಂದಿಗೆ ಮಾತ್ರ ಚುನಾವಣಾಧಿಕಾರಿಗಳ ಕಚೇರಿಗೆ ಬರಲು ಅನುಮತಿ ನೀಡಲಾಗಿದೆ. ಒಟ್ಟು 5 ಮಂದಿಗೆ ಮಾತ್ರ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಇರಲು ಅವಕಾಶ ಕಲ್ಪಿಸಲಾಗಿದೆ ಎಂದರು.

ನಾಮಪತ್ರಗಳ ಪರಿಶೀಲನೆ ನಂತರ ಏ.20 ರಂದು ನಾಮಪತ್ರ ವಾಪಸ್ಸಾತಿ ಕಾಲಾವಕಾಶ ಮುಗಿದ ನಂತರ ಅಂತಿಮವಾಗಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳನ್ನು ಪ್ರಕಟಿಸಲಾಗುವುದು. ಮೇ 07 ರಂದು ಮತದಾನ ನಡೆಯಲಿದ್ದು, ಜೂ.4 ರಂದು ಮತ ಎಣಿಕೆ ನಡೆಯಲಿದೆ. ಜೂ.6 ರಂದು ಚುನಾವಣೆ ಪ್ರಕ್ರಿಯೆ ಸಂಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಸೇರಿದಂತೆ ಜಿಲ್ಲಾ ಚುನಾವಣಾಧಿಕಾರಿ ಕಚೇರಿಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಬಳ್ಳಾರಿ (ಪ.ಪಂ) ಲೋಕಸಭೆ ಸಾರ್ವತ್ರಿಕ ಚುನಾವಣೆಗೆ ಏ.12 ರಿಂದ 19 ರ ವರೆಗೆ ಉಮೇದುವಾರರ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯು ನಡೆಯುವುದರಿಂದ, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸಿಆರ್ ಪಿಸಿ ಕಾಯ್ದೆ 1973 ಕಲಂ 144 ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ಸುತ್ತ ಮುತ್ತಲಿನ 100 ಮೀಟರ್ ವ್ಯಾಪ್ತಿ ಪ್ರದೇಶವನ್ನು ನಿರ್ಭಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.















# ಪವಿತ್ರ ರಂಜಾನ್ ಸಂಭ್ರಮ

### ಶಾಂತಿ ಸೌಹಾರ್ದತೆಗೆ ಸಾಮೂಹಿಕ ಪ್ರಾರ್ಥನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಪವಿತ್ರ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಂಭ್ರಮ ಸಡಗರಿಂದ ಗುರುವಾರ ಆಚರಿಸಿದರು. ನಗರೆದ ಆರ್‌ಟಿಓ ಕಚೇರಿ ಹಿಂಭಾಗದ ಈದ್ಗಾ, ಬಸ್ ಡಿಪೋ ಹತ್ತಿರಬದ ಹೊಸ ಈದ್ಗಾ, ಚಿತ್ತವಾಡ್ಗಿ ಈದ್ಗಾ, ಕಾರಿಗನೂರು ಈದ್ಗಾ, ಟಿ.ಬಿ.ಡ್ಯಾಂ ಈದ್ಗಾ, ನಾಗೇನಹಳ್ಳಿ ಈದ್ಗಾ ಸೇರಿದಂತೆ ನಗರದ ಅಂಬೇಡ್ಕರ ವೃತ್ತದ ಸಮೀಪದ ಗುಲಾಬ್ ಶ್ಹಾ ವಲಿ ದರ್ಗಾ ಇರುವ ಹಳೇ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಮುಸ್ಲಿಂ ಧರ್ಮ ಗುರುಗಳಾದ ಹಾಫಿಜ್ ಅಬ್ದುಲ್ ಸಮದ್ ಅವರು ನಮಾಜ್ ನೆರವೇರಿಸಿದರು. ನಂತರ ಅಂಜುಮನ್ ಖಿದ್ಮತೆ ಇಸ್ಲಾಂ ಕಮಿಟಿ ಅಧ್ಯಕ್ಷ ಎಚ್.ಎನ್.ಎಫ್ ಮಹಮ್ಮದ ಇಮಾಮ್ ನಿಯಾಜಿ ಮಾತನಾಡಿ, ಮೂವತ್ತು ದಿನಗಳ ಉಪವಾಸದೊಂದಿಗೆ ಸಮಾಜದಲ್ಲಿ ಪರಸ್ಪರರ ನಡುವೆ ಪ್ರೀತಿ, ವಿಶ್ವಾಸ, ಶಾಂತಿ, ಆರೋಗ್ಯ, ಸಮೃದ್ಧಿ ಬಯಸಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಲಾಗಿದೆ. ಅಂಜುಮನ್ ಕಮಿಟಿಯಿಂದ ಸಮುದಾಯದ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. ಮುಸ್ಲಿಂ ಸಮುದಾಯದ ಪ್ರತಿ ಕುಟುಂಬ ಆರ್ಥಿಕ ನೆರವು ನೀಡುವ ಮೂಲಕ ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ ಶಕ್ತಿ ತುಂಬಬೇಕು. ಅಂಜುಮನ್ ಕಮಿಟಿಯಿಂದ ಹಮ್ಮಿಕೊಂಡಿರುವ ವಿವಿಧ ಕಾಮಗಾರಿಗಳ ಪ್ರಗತಿ, ಧ್ಯೇಯೋದ್ದೇಶಗಳನ್ನು ತಿಳಿಸಿದರು. ಹಿಂದೂ ಸಮಾಜದವರ ಕೊಡುಗೆಯನ್ನು ಸ್ಮರಿಸಿದರು.



ಕಮಿಟಿ ಉಪಾಧ್ಯಕ್ಷರಾದ ಎಮ್ ಫಿರೋಜ್ ಖಾನ್, ಕಾರ್ಯದರ್ಶಿಗಳಾದ ಎಮ್.ಡಿ.ಅಬೂಬಕ್ಕರ್ ಖಾಜಾಂಚಿ ಜಿ ಅನ್ಸರ್ ಭಾಷ ಸಹಕಾರ್ಯದರ್ಶಿ ಡಾ.ಎಮ್.ಡಿ.ದುರ್ವೇಶ್ ಮೈನುದ್ದಿನ್ ಹಾಗು ಸದ್ಯಸರುಗಳಾದ ಕೋತ್ವಾಲ್ ಮೊಹಮ್ಮದ್ ಮೋಸಿನ್ ಅಡ್ವಕೇಟ್ ಸದ್ದಾಮ್ ಮತ್ತು ಎಲ್ ಗುಲಾಮ್ ರಸೂಲ್ ಅಬ್ದುಲ್ ಖಾದರ್ ರಫಾಯಿ ಖದೀರ್ ಹಾಗೂ ಮುಖಂಡರಾದ ಖದೀರ್. ಬಡಾವಲೀ. ವಾಹೀದ್ ಬೈ, ನಾಸೀರ್. ಖಾನ್‌ಸಾಬ್. ರಜಾಕ್. ಹಾಗೂ ಸಾವಿರಾರು ಮುಸ್ಲಿಂ ಭಾಂಧವರು ಹಾಗು ಇತರೆ ಸಮಾಜದ ಮುಖಂಡರಾದ ಸಾಲಿ ಸಿದ್ದಯ್ಯ, ಆರ್ ಕೊಟ್ರೇಶ್, ರವಿಶಂಕರ್, ಪಿ.ವೆಂಕಟೇಶ್, ಬಂಡಿ ಸೀನಪ್ಪ, ಕಬ್ಬೇರ್ ಗಾಳೆಪ್ಪ, ಹಾನಗಲ್ ವೆಂಕೋಬಣ್ಣ, ಸತ್ಯ ನಾರಾಯಣ, ವಿಜಯ ಕುಮಾರ್, ತಳವಾರ್ ಕೇರಿ ಹನುಮಪ್ಪ, ವಾಸಪ್ಪ, ಬಂದಿ ನಾರಾಯಣ, ನೀಲಕಂಠ, ಕಿಚಡಿ ಶ್ರೀನಿವಾಸ, ವಿಜಯ ಕುಮಾರ್ ಇತರರು ಇದ್ದರು.









### ಸಾರ್ವತ್ರಿಕ ಲೋಕಸಭಾ ಚುನಾವಣೆ–2024

# ಕರಪತ್ರ, ಪೋಸ್ಟರ್‌ಗಳ ಮೇಲೆ ಮುದ್ರಕರ, ಪ್ರಕಾಶಕರ ಹೆಸರು, ವಿಳಾಸ ಕಡ್ಡಾಯ

■ **ಹಂಪಿ ಟೈಮ್ಸ್ ಕೊಪ್ಪಳ**

ಸಾರ್ವತ್ರಿಕ ಲೋಕಸಭಾ ಚುನಾವಣೆಯ ಅಂಗವಾಗಿ ಅಭ್ಯರ್ಥಿಗಳ ಪ್ರಚಾರಕ್ಕೆ ಮುದ್ರಿಸುವ ಕರಪತ್ರ, ಪೋಸ್ಟರ್‌ಗಳಲ್ಲಿ ಜನತಾ ಪ್ರಾತಿನಿಧ್ಯ ಕಾಯ್ದೆ 1951 ರ ಸೆಕ್ಷನ್ 127ಎ ಅನ್ವಯ ಮುದ್ರಕರ ಹೆಸರು, ವಿಳಾಸ ಹಾಗೂ ಮುದ್ರಣಗಳ ಪ್ರತಿಗಳ ಸಂಖ್ಯೆಯನ್ನು ಕಡ್ಡಾಯವಾಗಿ ಮುದ್ರಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ತಿಳಿಸಿದ್ದಾರೆ.

ಚುನಾವಣಾ ಆಯೋಗದ ನಿರ್ದೇಶನದಂತೆ ಮುದ್ರಿತ ಪ್ರಚಾರ ಸಾಮಗ್ರಿಗಳಲ್ಲಿ ಮುದ್ರಕರ ಹಾಗೂ ಪ್ರಕಾಶಕರ ಗುರುತನ್ನು ಬಹಿರಂಗ ಪಡಿಸುವುದು ಕಡ್ಡಾಯ. ಮುದ್ರಿತ ಪ್ರಚಾರ ಸಾಮಗ್ರಿಗಳಲ್ಲಿನ ವಿಷಯಗಳಿಗೆ ಮುದ್ರಕರು ಹಾಗೂ ಪ್ರಕಾಶಕರು ಜವಾಬ್ದಾರರಾಗಿರುತ್ತಾರೆ.

ಸೂಚನೆ ಉಲ್ಲಂಘಿಸುವವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಉದ್ದೇಶದಿಂದ ಹೋರ್ಡಿಂಗ್‌ಗಳು /ಪೋಸ್ಟರ್‌ಗಳು/ಬ್ಯಾನರ್‌ಗಳು ಇತ್ಯಾದಿಗಳಿಗೆ ಜವಾಬ್ದಾರರಾಗಿರುವ ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಅಗತ್ಯ ನಿಗಾ ವಹಿಸಲು ಸೂಚಿಸಿದೆ. ಜನತಾ ಪ್ರಾತಿನಿಧ್ಯ ಕಾಯ್ದೆ 1951ರ ಉಲ್ಲಂಘನೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಳಕಿನ ಹಾದಿ

### ಮುಂಗೋಪದ ಮರ



ಒಂದು ದೊಡ್ಡ ಕಾಡಿನಲ್ಲಿ ಒಂದು ದೊಡ್ಡ ಮರವಿತ್ತು. ಅದು ಇಡೀ ಕಾಡಿಗೆ ದೊಡ್ಡ ಮರ ಎಂದು ಹೆಸರುವಾಸಿಯಾಗಿತ್ತು. ಆದರೇನು? ಅದಕ್ಕೆ ಮುಂಗೋಪ ಜಾಸ್ತಿ ಇತ್ತು. ಯಾರಿಗೂ ಅದು ನೆರಳು ನೀಡುತ್ತಿರಲಿಲ್ಲ. ಆಶ್ರಯ ಅರಸಿ ಬಳಿ ಬಂದ ಪ್ರಾಣಿ, ಪಕ್ಷಿ, ಮನುಷ್ಯರನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಹಾಗಾಗಿ ಯಾರೂ ಅತ್ತ ಸುಳಿಯುತ್ತಿರಲಿಲ್ಲ. ಕಾಡಿನಲ್ಲಿ ಅದು ಒಂಟಿ ಮರ ಎಂದು ಕುಖ್ಯಾತಿ ಗಳಿಸಿತು.

ಹೀಗಿರಲು ಮಳೆಗಾಲ ಮುಗಿದ ನಂತರ ಚಳಿಗಾಲ ಪ್ರಾರಂಭವಾಯಿತು. ಮುಂಗೋಪದ ಮರದ ಎಲೆಗಳೆಲ್ಲ ಉದುರಿದವು. ಎಲೆಗಳಿಲ್ಲದೇ ಮುಂಗೋಪದ ಮರ ಶೀತದಿಂದ ಬಳಲುತ್ತಿತ್ತು. ಅದೇ ವೇಳೆ ಕಾಡಿನ ಮಾರ್ಗವಾಗಿ ಒಬ್ಬ ಪುಟ್ಟ ಹುಡುಗಿ ಅಜ್ಜಿ ಮನೆಗೆ ಹೊರಟಿದ್ದಳು. ಮುಂಗೋಪದ ಮರ ಬಳಿ ಬಂದ ಹುಡುಗಿ, ಚಳಿಗೆ ಅದು ನಡುಗುತ್ತಿರುವುದನ್ನು ಕಂಡಳು. ಮರವನ್ನು ಬೆಚ್ಚಗಾಗಿಸಲು ಏನಾದರೂ ಸಹಾಯ ಮಾಡಬೇಕೆಂದುಕೊಂಡಳು. ಅಜ್ಜಿಯ ಮನೆ ಕಡೆ ವೇಗವಾಗಿ ಹೆಜ್ಜೆ ಹಾಕಿದಳು. ಅಜ್ಜಿಯ ಮನೆಯಲ್ಲಿದ್ದ ಹಳೆಯ ಸೀರೆಗಳನ್ನೆಲ್ಲ ಒಟ್ಟುಗೂಡಿಸಿ ಮರದ ಬಳಿಗೆ ಬಂದಳು. ಎಲ್ಲಾ ಸೀರೆಗಳನ್ನು ಸೇರಿಸಿ ಮರಕ್ಕೆ ಹೊದಿಕೆ ಮಾಡಲು ಮುಂದಾದಳು.

ಕೂಡಲೇ ಅಶರೀರವಾಣಿಯೊಂದು ಕೇಳಿತು. 'ಏಯ್ ಹುಡುಗಿ, ಅದು ಒಂಟಿ ಮರ. ಅದು ಇದುವರೆಗೂ ಯಾರನ್ನೂ ಹತ್ತಿರ ಸೇರಿಸಿಲ್ಲ. ಯಾರಿಗೂ ಅದು ನೆರಳು ನೀಡಿಲ್ಲ, ಆಶ್ರಯ ನೀಡಿಲ್ಲ. ಹಾಗಾಗಿ ಇಲ್ಲಿನ ಯಾರೂ ಅದಕ್ಕೆ ಸಹಾಯ ಮಾಡಲು ಮುಂದಾಗಿಲ್ಲ. ಹೀಗಿರುವಾಗ ನೀನೇಕೆ ಆ ಮರಕ್ಕೆ ಸಹಾಯ ಮಾಡುವೆ?' ಎಂದಿತು. ಆದರೂ ಆ ಹುಡುಗಿ ಅಶರೀರವಾಣಿಯ ಮಾತುಗಳನ್ನು ನಿರ್ಲಕ್ಷಿಸಿದಳು. ಮರವು ಕಷ್ಟದಲ್ಲಿರುವಾಗ ಸಹಾಯ ಮಾಡುವುದು ನನ್ನ ಧರ್ಮ ಎಂದು ಭಾವಿಸಿ ಮರಕ್ಕೆ ಹೊದಿಕೆ ಹಾಕಿ ಅದರ ಚಳಿ ಕಡಿಮೆ ಮಾಡಿದಳು.

ಮುಂದಿನ ವಸಂತಕಾಲದಲ್ಲಿ ಮರವು ಹೊಸ ಎಲೆಗಳೊಂದಿಗೆ ಚಿಗುರಿತು. ಹುಡುಗಿ ತನಗೆ ತೋರಿದ ಔದಾರ್ಯದಿಂದ ಮರವು ಪಾಠ ಕಲಿತಿತ್ತು. ತನ್ನ ಬಳಿ ಬಂದ ಎಲ್ಲಾ ಜೀವಿಗಳನ್ನು ಸ್ವಾಗತಿಸಿ ಅವುಗಳಿಗೆ ಆಶ್ರಯ ನೀಡಿತು. ತನ್ನಲ್ಲಿದ್ದ ಹಣ್ಣುಗಳನ್ನು ಪ್ರಾಣಿ ಪಕ್ಷಿಗಳಿಗೆ ಹಂಚಿತು. ಮರದ ಬಳಿ ಯಾರಾದರೂ ಬಂದರೆ ಬಾಗಿ ಅವರಿಗೆ ನೆರಳು ನೀಡುತ್ತಿತ್ತು. ಮುಂಗೋಪದ ಮರದಲ್ಲಾಗ ಬದಲಾವಣೆಯನ್ನು ಗಮನಿಸಿದ ಅಶರೀರವಾಣಿಯು ಕಾಡಿನ ಇತರೆ ಎಲ್ಲಾ ಪ್ರಾಣಿಗಳಿಗೆ ಈ ವಿಷಯ ತಿಳಿಸಿತು. ಅಂದಿನಿಂದ ಎಲ್ಲರೂ ಪ್ರೀತಿ, ಸಹಕಾರ, ಮಮತೆ, ಸಂತೋಷದಿಂದ ಜೀವನ ಸಾಗಿಸಿದರು. ಹುಡುಗಿಯಿಂದ ದಯೆ ಮತ್ತು ಉದಾರತೆಯನ್ನು ಕಲಿತ ಮರವು ನೂರಾರು ವರ್ಷಗಳವರೆಗೆ ಎಲ್ಲಾ ಜೀವಿಗಳು ಆಶ್ರಯ ನೀಡಲು ಮುಂದಾಯಿತು. ನಮ್ಮಲ್ಲಿರುವುದನ್ನು ಹಂಚುವುದರಿಂದ ನಮ್ಮ ಸಂಪತ್ತು ಕಡಿಮೆಯಾಗುವುದಿಲ್ಲ, ಬದಲಾಗಿ ಬೇರೊಂದು ರೂಪದಲ್ಲಿ ವೃದ್ಧಿಯಾಗುತ್ತದೆ ಎಂಬ ಪಾಠವನ್ನು ಮರವು ಕಲಿಯಿತು.

– ಆರ್.ಬಿ.ಗುರುಬಸವರಾಜ






### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

# ಅವರಸರದ ಕೀಲಿಕೈ ಸಮಾಧಾನ

ಇತ್ತೀಚಿನ ದಿನಗಳಲ್ಲಿ ಯಾರಲ್ಲಿಯೂ ಸಮಾಧಾನವೆಂಬುದು ಇಲ್ಲವೇ ಇಲ್ಲ. ಇದನ್ನು ನಮ್ಮೊಳಗಿರುವ ಭಾವನಾತ್ಮಕವಾದ ಪ್ರತಿಭೆ ಎನ್ನಬಹುದು. ಇದನ್ನು ಜೀವನದಲ್ಲಿ ಸಾಧಿಸಿಕೊಂಡು ಯಶಸ್ವಿಯಾದವರ ಬಗೆಗೆ ಅವಲೋಕನ ಮಾಡಿದರೆ ನಮ್ಮೊಳಗೆ ಅಂತಹ ಭಾವನೆ ಮೊಳಕೆಯೊಡೆಯಲು ಸಾಧ್ಯ. ಆದರೂ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗದಿರುವ ಸಂದರ್ಭದಲ್ಲಿ ಕೇವಲ ಹಣ, ಅಧಿಕಾರ, ಅಂತಸ್ತುಗಳಿಂದ ಅಳೆಯುವ ನಮ್ಮ ನಮ್ಮ ಮನಸ್ಸನ್ನು ಒಂದು ಕ್ಷಣ ಪ್ರಶ್ನಿಸಿಕೊಳ್ಳಬೇಕಾಗಿದೆ.

ಭೂಮಿಗೆ ಬರುವಾಗ ಬರಿಗೈಲಿ ಬಂದಿದ್ದೇವೆ ಹೋಗುವಾಗಲೂ ಅಷ್ಟೆ. ಅಂದಮೇಲೆ ಒಬ್ಬರನ್ನೊಬ್ಬರು ಇರುವಷ್ಟು ದಿನಗಳ ಕಾಲ ಹೊಂದಾಣಿಕೆಯ ಪ್ರವೃತ್ತಿಯಿಂದ ಬಾಳಿದರೆ ಸಾಲದೆ? ಜೀವನದಲ್ಲಿ ಇತರರೊಂದಿಗೆ ಯಾವುದೇ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳನ್ನು ಮಾಡಿಕೊಳ್ಳದೇ ಹೊಂದಾಣಿಕೆ ಮತ್ತು ಪ್ರೀತಿ ವಿಶ್ವಾಸಗಳಿದ್ದರೆ ನಮ್ಮಲ್ಲಿ ಯಾವ ಬಿರುಕುಗಳಿರುವುದಿಲ್ಲ. ಆಗ ನಮ್ಮ ಬದುಕು ಸುಂದರವಾಗುತ್ತದೆ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Scan For Digital Colourful HAMPI TIMES E-paper

ಮೂರು ದಿನದ ಬದುಕಿನಲ್ಲಿ ಹೊಂದಾಣಿಕೆಯೆಂಬುದು ಎಷ್ಟೊಂದು ಕಷ್ಟ. ಆದರೂ ಅರ್ಥೈಸಿಕೊಂಡು ವರ್ತಿಸಿದರೆ, ನಾವಂದು ಕೊಂಡ ಕನಿಷ್ಠ ಕೆಲಸ ಕಾರ್ಯಗಳೆಲ್ಲಾ ಸುಗಮವಾಗಿ ನಡೆಯುತ್ತವೆ. ನಮ್ಮ ತುಡಿತ-ಮಿಡಿತಗಳನ್ನು ಇತರರೊಂದಿಗೆ ಹಂಚಿಕೊಂಡಾಗಲೂ ಹೃದಯ ಹಗುರಾಗುತ್ತದೆ. ಒಮ್ಮೊಮ್ಮೆ ಕೆಲವು ಸಣ್ಣ ವಿಚಾರಗಳಿಗೆ ತಲೆಕೆಡಿಸಿಕೊಂಡು ವೃಥಾ ಸೊರಗುತ್ತೇವೆ. ಇದನ್ನೆಲ್ಲಾ ಮರೆತು ನಮ್ಮ ಬದುಕನ್ನು ನಿರಾಡಂಭರಾವಾಗಿ ಸಾಗಿಸುವುದಕ್ಕೆ ಬೇಕಾಗಿರುವುದು ಅಧಿಕಾರ-ಅಂತಸ್ತುಗಳಲ್ಲ, ಮಾನವೀಯ ಮೌಲ್ಯಗಳಷ್ಟೆ.

ನಾಳಿನ ಬಗ್ಗೆ ಇಂದು ಚಿಂತಿಸುತ್ತಾ ಹಿಂದಿನದನ್ನು ಮರೆಯಬಾರದು. ಎಲ್ಲರೂ ನಮ್ಮಂತೆ ಇರಬೇಕೆಂದು ಬಯಸಲೂಬಾರದು. ಎಲ್ಲವೂ ಯೋಚಿಸಿದಂತೆ ಇಲ್ಲಿ ನಡೆಯುವುದಿಲ್ಲವಾದ್ದರಿಂದ ಸಾಕಷ್ಟು ಕಾಲ ಅದರಲ್ಲಿಯೇ ಕಳೆಯಬಾರದು. ಆಯಾಕಾಲಕ್ಕೆ ತಕ್ಕಂತೆ ಸೂಕ್ತ ನಿರ್ಧಾರಗಳನ್ನು ತಡವಿಲ್ಲದೆ ತೆಗೆದುಕೊಳ್ಳಬೇಕು. ಪ್ರತಿಯೊಬ್ಬರಲ್ಲಿರುವ ಒಳ್ಳೆಯ ಗುಣಗಳನ್ನು ಗೌರವಿಸಿದರೆ ಎಲ್ಲರೂ ಇಷ್ಟವಾಗುತ್ತಾರೆ. ಆಗ ನಮ್ಮ ಬದುಕು ಹಸನಾಗುತ್ತದೆ. ಕೆಲವೊಮ್ಮೆ ನಮ್ಮ ಯೋಜನೆಗಳು ಕಾರ್ಯಗತಗೊಳ್ಳದೇ ನಿರಾಶೆ ಆವರಿಸಬಹುದು. ಸ್ವಲ್ಪ ಸಮಯ ಕಾಯಬೇಕಾಗುತ್ತದೆ. ಕಾಯುವುದೆಂದರೆ ಒಳಗೊಳಗೆ ಬೇಯುವುದಲ್ಲ ಸಹನೆಯೊಂದಿಗೆ ಮಾಗುವುದು. ಅಂತಹ ಸಂದರ್ಭದಲ್ಲಿ ತಾಳ್ಮೆಯೊಂದೇ ನಮ್ಮನ್ನು ಕೈಹಿಡಿಯುತ್ತದೆ. ಶಾಂತತೆಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಾಗ ದೊರೆಯುವ ಆನಂದಕ್ಕೆ ಬೆಲೆ ಕಟ್ಟಲಾಗುವುದಿಲ್ಲ.

ಕೆಲವೊಮ್ಮೆ ಮಾನಸಿಕ ಸ್ಥಿತಿ ಹದಗೆಟ್ಟಾಗ ಅಡ್ಡದಾರಿ ಹಿಡಿಯುವ ಪ್ರಯತ್ನ ಮಾಡಲೇಬಾರದು. ಮನದ ಸ್ಥಿತಿ-ಗತಿಗಳನ್ನು ಅರ್ಥೈಸಿಕೊಂಡು ಯಾವ ಮೂಲದಿಂದ ಹೀಗಾಗಿದೆ ಅದನ್ನು ಯಾರಿಂದ? ಹೇಗೆ? ಯಾವಾಗ? ಎಲ್ಲಿ? ಬಗೆಹರಿಸಿಕೊಳ್ಳಬೇಕೆಂಬ ಆಲೋಚನೆ ಮುಖ್ಯ. ಪರಿಸ್ಥಿತಿಯ ಒತ್ತಡದಿಂದ ಎಲ್ಲರಿಗೂ ಕೆಲವು ಸಲ ಅಸಮಧಾನ ಉಂಟಾಗುವುದು ಸಹಜ. ಉತ್ಸಾಹ ಕಳೆದುಕೊಂಡ ಸಮಯದಲ್ಲಿ ನಮಗೆ ಸಮಾಧಾನವಾಗಬೇಕೆಂದಿದ್ದರೆ, ಉತ್ತಮ ಪುಸ್ತಕಗಳನ್ನು ಓದುವುದು, ಒಳ್ಳೆಯ ಸಂಗೀತ ಆಲಿಸುವುದು. ಶಾಂತಿ-ನೆಮ್ಮದಿ ಬೇಕೆಂದಿದ್ದರೆ ಇತರರನ್ನು ದ್ವೇಷಿಸಬಾರದು. ನಮ್ಮನ್ನು ಎಲ್ಲರು ಇಷ್ಟಪಡಬೇಕೆಂದಿದ್ದರೆ ಯಾರನ್ನೂ ನೋಯಿಸಲು ಹೋಗಬಾರದು. ಮತ್ತೊಬ್ಬರ ಅಭಿಪ್ರಾಯಗಳಿಗೆ ಮನಸ್ಸು ಸ್ಪಂದಿಸದಿದ್ದರೆ ಬದುಕು ವಿಕಾಸವಾಗುವುದಾದರೂ ಹೇಗೆ?

ಕಷ್ಟದಲ್ಲಿದ್ದಾಗ, ಅನಾರೋಗ್ಯಕ್ಕೆ ಒಳಗಾದಾಗ, ಬೇಸರದಿಂದ ಮನ ಬಳಲಿದಾಗ ಮಿತ್ರರೇ ಆಗ ಆಧಾರ. ಆದ್ದರಿಂದ ಹೆಚ್ಚೆಚ್ಚು ಉತ್ತಮ ಗೆಳೆಯರನ್ನು ಸಂಪಾದಿಸಬೇಕು. ಇಂತಹ ಸ್ನೇಹಿತರಲ್ಲಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿದಾಗ ಒಂದು ಕೃತಜ್ಞತಾಭಾವ ಸೂಚಿಸಿದರೆ ಇದರ ಪರಿಣಾಮ ಅಗಾಧವಾಗಿರುತ್ತದೆ. ಆಗ ನಮ್ಮಲ್ಲಿ ಧನ್ಯತಾಭಾವ ಮೂಡುತ್ತದೆ.




ಎಲ್ಲದರಲ್ಲೂ ನಾವೇ ಬುದ್ಧಿವಂತರು ಎಂದುಕೊಂಡರೆ ಅಹಂಕಾರ ಬುಸ್‌ಗುಡುತ್ತದೆ. ನಾವೆಷ್ಟು ಸಂತಸವಾಗಿದ್ದೇವೆ ಎಂಬುದಕ್ಕಿಂತಲೂ ನಮ್ಮಿಂದಾಗಿ ಬೇರೋಬ್ಬರು ಎಷ್ಟು ಸಂತಸವಾಗಿದ್ದಾರೆಂಬುದು ಮುಖ್ಯ. ಇತರರ ತಪ್ಪುಗಳು ಕಂಡಾಗ ಸಮಾಧಾನದಿಂದ ತಿಳಿಯಪಡಿಸಿದರೆ ಆಗ ಅವರ ಮೊಗದಲ್ಲಿ ನಗು ತನ್ನಿಂದ ತಾನೇ ಅರಳುತ್ತದೆ.

ಆಧುನಿಕ ವಚನಕಾರರಾದ ಸಿದ್ಧಯ್ಯ ಪುರಾಣಿಕರು ಹೇಳಿದಂತೆ: 'ಎಲ್ಲವೂ ಎನಗಾಗಿ ಎನ್ನುವುದೇ ಕೆಡಕು, ಇದ್ದುದೆಲ್ಲ ಎಲ್ಲರಿಗಾಗಿ ಎನ್ನುವುದೇ ಒಳಿತು. ತನ್ನಿಂದ ಅನ್ಯರಿಗೆ ಕೇಡಾಗದಂತೆ ಬದುಕುವುದೇ ಧರ್ಮ, ಅನ್ಯರ ಬಳಲಿಸಿ ತನ್ನ ಬೊಜ್ಜು ಬೆಳೆಸುವುದೇ ಅಧರ್ಮ'. ಜನಪದರು ಹೇಳಿದಂತೆ ಎಲ್ಲರ ಮನಸ್ಸನ್ನು ಪ್ರೀತಿಯಿಂದ ಗೆಲ್ಲಲ್ಲು ಸಾಧ್ಯವೇ ಹೊರತು ಕೋಪ-ತಾಪಗಳಿಂದಲ್ಲ. ಜೀವನದಲ್ಲಿ ಎಲ್ಲರನ್ನೂ ನಗು ನಗುತಾ ಮಾತಾಡಿಸುತ್ತಿದ್ದರೆ ಭಗವಂತ ಕರುಣಿಸಿದ ಈ ಮಾನವ ಜನ್ಮದ ಸಾರ್ಥಕತೆ ನಿಜವಾಗಿಯು ಅನುಭವಿಸಿದಂತಾಗುತ್ತದೆ.

# ಬೆಲೆ ಬಾಳುವ ಸಂಪತ್ತು ಸಮಯ



ಸಾಮಾನ್ಯ ಜೀವನದ ಅತ್ಯಮೂಲ್ಯ ಪದವೆಂದರೆ ಸಮಯ. ಒಬ್ಬ ವ್ಯಕ್ತಿಯ ಹುಟ್ಟಿನಿಂದ ಅವನ ಅಥವಾ ಅವಳ ಕೊನೆಯ ಉಸಿರು ಇರುವವರೆಗೂ ಬರುವ ಏಕೈಕ ಪದವಾಗಿದೆ. ಸಮಯವು ಹಣಕ್ಕಿಂತ ಹೆಚ್ಚು ಏಕೆಂದರೆ ಖರ್ಚು ಮಾಡಿದ ಹಣವನ್ನು ಮತ್ತೆ ಗಳಿಸಬಹುದು ಆದರೆ ಒಮ್ಮೆ ಕಳೆದ ಸಮಯವನ್ನು ಎಂದಿಗೂ ಗಳಿಸಲಾಗುವುದಿಲ್ಲ. ಸಮಯ ಪ್ರತಿಯೊಬ್ಬರ ಜೀವನ ನಡೆಸಲು ಅವಶ್ಯಕ ಮತ್ತು ಅನಿವಾರ್ಯವಾಗಿದೆ. ಸಮಯವು ಸಾಧನೆಗೆ ಜೀವವಿದ್ದಂತೆ. ಈ ಭೂಮಿಯ ಮೇಲೆ ಅತಿ ಹೆಚ್ಚು ಬೆಲೆ ಬಾಳುವ ಸಂಪತ್ತು ಯಾವುದಾದರೂ ಇದ್ದರೆ ಅದು ಸಮಯ. ಕೆಲವರು ಹೇಳುವ ಹಾಗೆ ಸಮಯದಲ್ಲಿ ಕೆಟ್ಟ ಸಮಯ ಮತ್ತು ಒಳ್ಳೆಯ ಸಮಯ ಎಂಬ ಭಿನ್ನವಿಲ್ಲ. ನಾವು ಸಮಯವನ್ನು ಆ ರೀತಿ ತಿಳಿದುಕೊಂಡಿದ್ದೇವೆ ಅಷ್ಟೇ. ಸಮಯವು ಯಾರ ಮನೆಯ ಸ್ವತ್ತಲ್ಲ, ಅದು ಯಾರಿಗಾಗಿಯೂ ಕಾಯುವುದಿಲ್ಲ. ಸಮಯವು ಸಾಧಕನ ಸ್ವತ್ತು ವಿನಹ ಸೋಮಾರಿಯ ಸ್ವತ್ತಲ್ಲ. ಸಮಯವನ್ನು ಯಾರು ಪ್ರಾಮಾಣಿಕವಾಗಿ ಗೌರವಿಸುತ್ತಾರೋ ಅವರನ್ನು ಇಡೀ ಸಮಾಜವೇ ಗೌರವಿಸುತ್ತದೆ. ಕೆಲವೊಮ್ಮೆ ಒಂದೊಂದು ದಿನ ನಮಗೆ ಸಮಯ ಹೆಚ್ಚು ಇರುತ್ತದೆ ಇನ್ನೂ ಕೆಲವೊಮ್ಮೆ ಸಮಯವೇ ಇರುವುದಿಲ್ಲ. ಸಮಯದ ಅಭಾವ ಆ ಕ್ಷಣಕ್ಕೆ ಬಹಳ ಕಾಡುತ್ತದೆ. ಸಮಯ ಎಂಬುದು ಬಿಟ್ಟ ಬಾಣ ಅದು ಎಂದಿಗೂ ಮರಳಿಬಾರದು. ನಮಗಾಗಿ ಇರುವ ಸಮಯದಲ್ಲಿಯೇ ನಾವು ನಮ್ಮ ಕೆಲಸ ಕಾರ್ಯಗಳನ್ನು ಪೂರೈಸಿಕೊಂಡು ನಮ್ಮ ಗುರಿ ತಲುಪಬೇಕು. ಸಮಯಕ್ಕೆ ಬೆಲೆ ಕೊಡದ ವ್ಯಕ್ತಿಗೆ ಬದುಕಿನಲ್ಲಿ ಬೆಲೆ ಕೂಡ ಕಡಿಮೆ ಆಗುವುದು. ಸಮಯದ ಮಹತ್ವವನ್ನು ತಿಳಿದುಕೊಂಡು ನಡೆದಾಗ ಮಾತ್ರ ಅದು ಬದುಕಿನ ಪಾಠವನ್ನು ನಮಗೆ ತಿಳಿಸುವುದು.

ಈ ಭೂಮಿಯ ಮೇಲೆ ಯಾರು ಎಷ್ಟೇ ಶ್ರೀಮಂತರಿದ್ದರು ಕಳೆದುಹೋದ ಸಮಯವನ್ನು ಮರಳಿ ಪಡೆಯುವಷ್ಟು ಶ್ರೀಮಂತರು ಈ ಭೂಮಿಯ ಮೇಲೆ ಯಾರು ಇಲ್ಲ. ಹಾಗಾಗಿ ಅತ್ಯಂತ ಶ್ರೀಮಂತಿಕೆಯಿಂದ ತುಂಬಿದ ಸಮಯವನ್ನ ನಾವೆಲ್ಲರೂ ಪ್ರೀತಿಸೋಣ. ಬದುಕಿನ ಪಯಣದಲ್ಲಿ ಸಮಯ ಸಾಧಕರನ್ನು ನಂಬದೆ, ಸರಿಯಾದ ಸಮಯಕ್ಕೆ ಸಹಾಯ ಮಾಡುವ ಆತ್ಮೀಯರನ್ನು ನಂಬಿ ಬದುಕು ಸಾಗಿಸಬೇಕಾಗಿದೆ.ನಿನ್ನೆಯ ಸಮಯ ಮುಗಿದುಹೋಗಿದೆ, ನಾಳೆಯ ಸಮಯ ನಮ್ಮದಲ್ಲ, ಇವತ್ತಿನ ಸಮಯ ಮಾತ್ರ ನಮ್ಮದು. ಅದರಲ್ಲಿಯೇ ಇವತ್ತಿನ ದಿನದ ಈ ಕ್ಷಣ ಮಾತ್ರ ನಮ್ಮದು. ಹಾಗಾಗಿ ಸಮಯ ಬಹಳ ಅತ್ಯಮೂಲ್ಯವಾದುದು. ಮಿಂಚಿ ಹೋದ ಸಮಯಕ್ಕೆ ಚಿಂತಿಸಿ ಫಲವಿಲ್ಲ ಎಂಬಂತೆ ನಮಗಿರುವ ಈ ದಿನದ ಸಮಯವನ್ನು ಸರಿಯಾಗಿ ಬಳಸಿಕೊಳ್ಳಬೇಕು.

ಸಮಯ ಮೀರಿದ ಮೇಲೆ ಅದರ ಬಗ್ಗೆ ಚಿಂತಿಸಿದರೆ ಅದು ನಮ್ಮ ಮೂರ್ಖತನ. ಒಂದು ವರ್ಷದ ದೀರ್ಘ ಸಮಯಕ್ಕೂ ಕೂಡ ತನ್ನದೇ ಆದ ಮಹತ್ವವಿದೆ. ಅದೇ ರೀತಿ ಒಂದು ಸೆಕೆಂಡಿನ ಲಘು ಸಮಯಕ್ಕೂ ಕೂಡ ತನ್ನದೇ ಆದ ಮಹತ್ವವಿದೆ. ಸಮಯವನ್ನ ಆರಾಧಿಸೋಣ ಸಮಯವನ್ನ ಗೌರವಿಸೋಣ. ಭಗವಂತ ನಮಗಾಗಿ ನೀಡಿದ ಅಮೂಲ್ಯವಾದ ಸಂಪತ್ತಿನಲ್ಲಿ ಸಮಯ ಕೂಡ ಒಂದಾಗಿದೆ. ಸಮಯವನ್ನು ಅನಾವಶ್ಯಕ ಹಾಳು ಮಾಡದೆ ಸರಿಯಾಗಿ ಬಳಸಿಕೊಂಡು ಸಾಧಕರಾಗಿ ಉತ್ತಮ ಸಮಾಜದಲ್ಲಿ ಅತ್ಯುತ್ತಮ ನಾಗರಿಕರಾಗಿ ಬದುಕುವ ಒಂದು ಪ್ರಯತ್ನ ಮಾಡೋಣ. ಸಮಯದ ಬಗ್ಗೆ ಅರಿವು ಇಟ್ಟುಕೊಂಡು ಸಮಯ ಪಾಲಕರಾಗಿ ಬದುಕೋಣ. ಹಣ, ಆಸ್ತಿ ಅಥವಾ ಇತರ ಪ್ರಮುಖ ವಸ್ತುಗಳಂತಹ ಕಳೆದುಹೋದ ಪ್ರತಿಯೊಂದು ವಸ್ತುವನ್ನು ಸಹ ಮತ್ತೆ ಜೀವಕ್ಕೆ ತರಬಹುದು. ಸಮಯ, ಕೇವಲ ಒಂದು ಬಾರಿ ಅಮೂಲ್ಯವಾದ ವಸ್ತುವಾಗಿದೆ, ಅದು ಹೋದ ನಂತರ ಅದು ಮತ್ತೆ ಕಂಡುಬರುವುದಿಲ್ಲ ನಮ್ಮ ಪ್ರತಿಯೊಂದು ಕ್ಷಣವು ಅಮೂಲ್ಯವಾದದು ಅದನ್ನು ಹಾಗೆ ವ್ಯರ್ಥ ಮಾಡಬೇಡಿ.

– ಶ್ರೀ ಮುತ್ತು. ಯ ವಡ್ಡರ
ಶಿಕ್ಷಕರು ಬಾಗಲಕೋಟ 9845568484

# ಕಲೆ



ಕಲೆ ಎನ್ನುವುದು ಭಾವನೆ. ಕಲೆ ಎಂದರೆ ಬುದ್ದಿ ಪೂರ್ವಕವಾಗಿ ಜೋಡಿಸಲಾದ ಅಂಶಗಳ ರೂಪ. ಕಲೆಯು ಸಂಗೀತ, ಸಾಹಿತ್ಯ, ಶಿಲ್ಪಕಲೆ ಮತ್ತು ವರ್ಣಚಿತ್ರಕಲೆಗಳನ್ನೊಳಗೊಂಡಂತೆ ಮನುಷ್ಯನ ಅನೇಕ ಚಟುವಟಿಕೆಗಳನ್ನು, ಕಲ್ಪನಾ ಸೃಷ್ಟಿಗಳನ್ನು ಮತ್ತು ಭಾವನೆಗಳನ್ನು ಅಭಿವ್ಯಕ್ತಿಸುವ ಎಲ್ಲಾ ಪ್ರಕಾರಗಳನ್ನು ಆವರಿಸಿಕೊಂಡಿದೆ.

ಕಲೆಯು ಎಲ್ಲರಿಗೂ ಅಷ್ಟು ಸುಲಭವಾಗಿ ಒಲಿಯುವಂಥದ್ದಲ್ಲ. ದುಡ್ಡಿದ್ದ ಮಾತ್ರಕ್ಕೆ ಎಲ್ಲವನ್ನು ಖರೀದಿಸಲಾಗದು.ಸತತವಾದ ಪ್ರಯತ್ನ, ಕಲೆಯ ಮೇಲಿನ ನಿಷ್ಠೆ, ಶಿಸ್ತು, ಒಳ್ಳೆಯ ಸಂಸ್ಕೃತಿಗಳ ಪ್ರತಿಫಲವೇ ಕಲೆ.

ಆದರೆ ಇಂತಹ ಅನರ್ಘ್ಯ ಕಲೆಗೆ ಬೆಲೆ ಕಟ್ಟುವುದು ಎಷ್ಟು ಸರಿ?

ಅದಕ್ಕೆ ತಕ್ಕ ಮರ್ಯಾದೆ ಕೊಡುವುದು ನಮ್ಮ ಕರ್ತವ್ಯವಲ್ಲವೇ?

ಮರದ ಕೆಳಗೆ ಹೇಳಿಕೊಟ್ಟರು ಅದು ಕಲೆಯೇ, ಹವಾನಿಯಂತ್ರಣ ಕೊಠಡಿಯಲ್ಲಿ ಹೇಳಿಕೊಟ್ಟರು ಅದು ಕಲೆಯೇ. ಆದರೆ ನಮ್ಮ ಜನರ ಯೋಚಿಸುವ ಪರಿಯೇ ವಿಭಿನ್ನವಾಗಿದೆ, ಕಲೆಯನ್ನು ದಾನ ಮಾಡುವ ಗುರುಗಳನ್ನು ಮುಖ್ಯವಾಗಿ ಕಾಣದೆ. ಕಲೆಯನ್ನು ಕಲಿಯುವ ಕಟ್ಟಡ ಮತ್ತು ಅಲ್ಲಿ ತೆಗೆದುಕೊಳ್ಳುವ ಶುಲ್ಕಕ್ಕೆ ಆದ್ಯತೆ ನೀಡುತ್ತಾರೆ.ಇದು ಎಷ್ಟು ಸರಿ.

ಕರಕುಶಲ ಕರ್ಮಿಗಳು ತಮ್ಮ ತನು ಮನವನ್ನು ಒಗ್ಗೂಡಿಸಿ ಮಾಡಿದ ಸುಂದರ ಕಲಾಕೃತಿಗಳಿಗೆ, ಬೀದಿ ಬದಿಯಲ್ಲಿ ಮಾರಿದರೆ ಕಡಿಮೆ ಬೆಲೆ. ಅದೇ, ದೊಡ್ಡ ಮಾಲ್‌ಗಳಲ್ಲಿ ಮಾರಿದರೆ ಹೆಚ್ಚು ಬೆಲೆಯೆಂದು ನಾವೇ ನಿರ್ಧಾರ ಮಾಡುತ್ತೇವೆ. ಇದು ಕಲೆಗೆ, ಕಲಾವಿದನಿಗೆ ನಾವು ಮಾಡುವ ಅನ್ಯಾಯವಲ್ಲವೇ? ಕಲೆಯನ್ನು ಉಳಿಸಿ, ಬೆಳೆಸಲು. ನಾವು ಕಲಾವಿದರೆ ಆಗಬೇಕೆಂದೇನಿಲ್ಲ. ಬದಲಿಗೆ ಅವರಿಗೆ, ಅವರ ಕಲೆಗೆ ಸಲ್ಲಬೇಕಾದ ತಕ್ಕ ಗೌರವ ಕೊಟ್ಟು. ಸಮಾಜದಲ್ಲಿ ಉತ್ತಮ ಸ್ಥಾನಮಾನ ಕೊಟ್ಟರೆ ಸಾಕು. ತಾವು ಬೆಳೆದು, ಅವರಿಂದ ಇನ್ನೂ ಹೆಚ್ಚು ಜನರಿಗೆ ಕಲೆಯನ್ನು ಕಲಿಸಿ ಬೆಳೆಸುವುದರಲ್ಲಿ ಸಂದೇಹವಿಲ್ಲ.

– ಮಂಜುಶ್ರೀ ಮುರಳೀಧರ್.

# ಮಕ್ಕಳು ಮತ್ತು ಬೇಸಿಗೆ ರಜೆ

ರಜೆ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಹರ್ಷ. ಮೊದಲು ಹೊರಡುವುದೆ ಅಜ್ಜಿಯ ಮನೆ ಕಡೆ. ಅಜ್ಜಿಯ ಮನೆ ಎಂದರೆ ಅದೇನೋ ಪ್ರೀತಿ ಮತ್ತು ಸೆಳೆತ. ಎಷ್ಟು ದಿನ ಉಳಿದರು ಇಷ್ಟು ಬೇಗ ರಜೆ ಮುಗಿಯಿತಲ್ಲ ಎನ್ನುವ ಬೇಸರ. ಇದರ ನಡುವೆ ಬ್ಯಾಗಿನಲ್ಲಿ ಹೊತ್ತುಕೊಂಡು ಹೋಗುವ ಶಾಲೆಯ ರಜೆಯ ದಿನದ ಮನೆ ಕೆಲಸ (ಹೋಮ್ ವರ್ಕ್) .

**ರಜೆಯಲ್ಲಿ ಮಗುವಿನ ದಿನಚರಿ**

* ದಿನ ಬೆಳಿಗ್ಗೆ ತಿಂಡಿ ನಂತರ ಮಗುವಿನ ಶಾಲೆಯ ಕೆಲಸದ ಒಂದು ವಿಷಯ ಬರೆಸುವುದು.
* ಅವರಿಷ್ಟದ ಯಾವುದಾದರು ಹವ್ಯಾಸಗಳಿದ್ದರೆ ಮಾಡಲಿ ಉದಾಹರಣೆ :- ಹಾಡು ಹೇಳುವುದು, ನೃತ್ಯ, ಭಜನೆ ,ಚಿತ್ರಕಲೆ, ರಂಗೋಲಿ ಮುಂತಾದವು.
* ಸ್ವಲ್ಪ ಹೊತ್ತು ಮಗುವಿಗೆ ಕಾರ್ಟೂನ್ ನೆಟ್ವರ್ಕ ಹಚ್ಚಿ ಕೊಟ್ಟರೆ ಅವರಿಷ್ಟದ ಕಾರ್ಟೂನ್ ನೋಡುವರು.
* ಅತಿಯಾದ ಬಿಸಿಲು ಹೊರಗಡೆ ಇರುವುದರಿಂದ ಹೊರಗಡೆ ಆಟಕ್ಕೆ ಕಳುಹಿಸದೆ ಮನೆಯೊಳಗೆ ಆಡುವಂತೆ ತಿಳಿಸುವುದು.
* ಮಧ್ಯಾಹ್ನದ ಊಟದ ನಂತರ ಒಂದು ತಾಸು ನಿದ್ರೆ.
* ಸಾಯಂಕಾಲ ಸೈಕಲ್ ಆಟ, ಅಕ್ಕ ಪಕ್ಕದ ಮನೆಯ ಮಕ್ಕಳೊಡನೆ ಆಟ, ಮಣ್ಣಾಟ ಆಡುವುದು.
* ಮುಸ್ಸಂಜೆಯ ನಂತರ ಸ್ವಚ್ಛವಾಗಿ ಕೈಕಾಲು ಮುಖ ತೊಳೆದು ಬಾಯಿ ಪಾಠ, ಶ್ಲೋಕ ಹೇಳುವುದು ಮಾಡಿಸುವುದು.
* ಸ್ವಲ್ಪ ಹೊತ್ತು ಮತ್ತೆ ಶಾಲೆಯ ಕೆಲಸ ಮುಗಿಸಿ ರಾತ್ರಿ ಊಟ ಮಾಡಿ ಮಲಗಿಸುವುದು.

ಇದು ದಿನಚರಿ ಆದರು ಮಕ್ಕಳಿಗೆ ಮನೆಯಲ್ಲಿ ಇದ್ದು ಬೇಸರವಾಗುತ್ತದೆ ಎಂದು ಹತ್ತಿರದ ದೇವಸ್ಥಾನ, ಪಾರ್ಕಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಮಗುವಲ್ಲಿ ಮೂಡುವ ಕುತೂಹಲಕಾರಿ ಪ್ರಶ್ನೆಗೆ ಉತ್ತರಿಸುವುದು.

ಹತ್ತಿರದ ನೆಂಟರ ಮನೆಗೆ, ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗಿ ಸಂಬಂಧದ ಕುರಿತು ಅರಿವು ಮೂಢಿಸುವುದು. ಅವರು ನಿನಗೇನಾಗಬೇಕು ನಾನು ಅವರನ್ನು ಏನಂತ ಕರೆಯಬೇಕು ಎಂದೆಲ್ಲ ಮಗು ಕೇಳಿದಾಗ ಅವರ ಸಂಬಂಧದ ಕುರಿತು ತಿಳಿಸಲು ಮಗುವಿಗೆ ಸಂಬಂಧದ ಕುರಿತು ಜಾಸ್ತಿ ತಿಳಿಯದಿದ್ದರು ಸ್ವಲ್ಪ ಮಟ್ಟಿಗೆ ತಿಳಿಯುತ್ತದೆ.

ಅಜ್ಜಿ ಮನೆಗೆ ಕರೆದುಕೊಂಡು ಹೋಗಿ ಅಜ್ಜಿಯ ಕೈರುಚಿ ಸವಿಯುವುದರ ಜೊತೆಗೆ ವಾತಾವರಣ ಬದಲಾವಣೆ ಸಿಗುತ್ತದೆ. ತವರಿನ ನೆಂಟರ ಪರಿಚಯವಾಗುತ್ತದೆ. ಅಲ್ಲಿಗೆ ಬಂದ ಮಕ್ಕಳ ಪರಿಚಯವಾಗಿ ಆಟವಾಡುತ್ತಾರೆ. ತವರಿಗೆ ಹತ್ತಿರದಲ್ಲಿ ದೇವಸ್ಥಾನವಿದ್ದರೆ ,ಪಾರ್ಕ್ , ಸಮುದ್ರವಿದ್ದರೆ ಸಂಜೆಯ ಸಮಯದಿ ಮಕ್ಕಳ ಕರೆದುಕೊಂಡು ಹೋಗಬೇಕು.

ಅತಿಯಾದ ಸೆಖೆಯೆಂದು ತಂಪು ಪಾನೀಯಗಳ ಬಳಕೆ ಹೆಚ್ಚು ಮಾಡದೆ ಮನೆಯಲ್ಲಿ ತಯಾರಿಸಿದ ಲಿಂಬು ಪಾನಕ , ಕೋಕಂ ನಾವೇ ಮಾಡಿ ಕೊಡುವುದರಿಂದ ಮಕ್ಕಳು ಆರೋಗ್ಯದಿಂದ ಇದ್ದು ರಜೆಯ ಮಜಾ ಮಾಡುವರು.

– ಸುವರ್ಣಾ ಭಟ್ಟ.

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

### ಕವಿ ಮನಸು

## ಕವಳ

ಕವಳವೆಂದರೆ ತುತ್ತು
ಕವಳವೆಂದರೆ ಗುಕ್ಕು
ಕವಳವೆಂದರೆ ಮುತ್ತು
ಕವಳವಿಲ್ಲದಿರೆ ಆಪತ್ತು //ಪ//

ಕವಳಕ್ಕಾಗಿ ಹೋರಾಟ
ಕವಳಕ್ಕಾಗಿ ಹಾರಾಟ
ಕವಳವೇ ಪ್ರೇರಣ
ಕವಳವಿಲ್ಲದಿರೆ ಮರಣ //01//

ಕವಳವೇ ಸಾಧನ
ಕವಳವೇ ಪಾವನ
ಕವಳವೇ ಲೋಕ
ಕವಳವಿಲ್ಲದಿರೆ ಪರಲೋಕ //02//

ಕವಳಕ್ಕಾಗಿ ಕಳವಳ
ಕವಳಕ್ಕಾಗಿ ಹಳಹಳ
ಕವಳವೇ ಪುಣ್ಯಧಾತು
ಕವಳವಿಲ್ಲದಿರೆ ಜೀವಹೋಯ್ತು //03//

ಕವಳ ಸಿಕ್ಕರೆ ಸೀರುಂಡೆ
ಕವಳ ಕದ್ದರೆ ಬಾಸುಂಡೆ
ಕವಳಕ್ಕಾಗಿ ಜಗತ್ತು
ಕವಳವೇ ಅದರ ಸ್ವತ್ತು //04//

ಕವಳ ಗಳಿಸಲು ದುಡಿ
ಕವಳವೇ ಗರ್ಭಗುಡಿ
ಕವಳ ಜೀವ ಪೂರಣ
ಕವಳವಿಲ್ಲದಿರೆ ಮರಣ //05//

**– ಶಂಕರ್.ಜಿ.ಬೆಟಗೇರಿ.**
ಉಪನ್ಯಾಸಕರು.,ಹೂವಿನಹಡಗಲಿ.

## ನಾಡಿನ ನಡುವೆ ಕಾಡಿನ ಮರ



ನಾಡಿನ ನಡುವೆ ಕಾಡಿನ ಮರವೇ
ನಿಂತಿರುವೆ ನೀ ಚೆಂದ
ನೆರಳನು ನೀಡುತ ಹೂಗಳ ಸುರಿಯೇ
ನೀಡಿದೆ ಮನಕೆ ಆನಂದ

ಎಲ್ಲರೂ ತಮ್ಮದೇ ಕಾಯಕ ನಿರತರು
ನಿನ್ನನು ಯಾರು ನೋಡಿಲ್ಲ
ಯಾರೇನೇ ಅನ್ನಲಿ ನೋಡದೆ ಇರಲಿ
ನಿನ್ನಯ ಕಾಯಕ ಬಿಡುವಿಲ್ಲ

ಯಾರು ನೆಟ್ಟರೋ ಬಾಲ್ಯದಿ ನಿನ್ನನು
ಬಡತನದಲ್ಲೇ ನೀ ಬೆಳೆದೆ
ಬಡತನಕೆ ಸೌಂದರ್ಯಸಿರಿ ಹೆಚ್ಚು
ಎನ್ನುವ ಸತ್ಯವ ನೀ ಸಾರಿದೆ

ಎನಗೂ ಕೂಡ ನಿನ್ನಯ ಹಾಗೆ
ಬಾಳಿ ಬದುಕುವ ಮಹದಾಸೆ
ನಾಲ್ಕು ಜನರಿಗೆ ನೆರಳನು ನೀಡುತಾ
ನಿಸ್ವಾರ್ಥದಿ ಇಲ್ಲೇ ಇರುವಾಸೆ

ಮೇಘದಿ ಇರುವ ಮಹಾದೇವನೇ
ಮಾಡುವೆ ನಿನಗೆ ಪ್ರಾರ್ಥನೆ
ಇಳೆಯಲಿ ಇರುವ ದುರುಳ ಮಾನವಗೆ
ಬೀಳದಿರಲಿ ಕಾಕ ದೃಷ್ಟಿಯನೇ

**– ಕೆ ಎಂ ಬಸವರಾಜ**
**ನಿವೃತ್ತ ಇಂಜನಿಯರ್, ಹೊಸಪೇಟೆ**

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

### ದುಡಿದು ತಿನ್ನುವ ಅನ್ನದ ರುಚಿ ದೇವಲೋಕದ ಅಮೃತಕ್ಕೆ ಸಮ

# ಶ್ರಮದ ತ್ಯಾಗದಿಂದಲೇ ಹೊಸ ದಿಗಂತ ಕಂಡವರು

ಅಭಿವೃದ್ಧಿಯ ಅಡಿಗಲ್ಲು ಭವಿಷ್ಯದ ಮೈಲುಗಲ್ಲು ಹೊಸ ಬೆಳಕಿನ ಕಡೆ ನಿತ್ಯವೂ ವಿನೂತನದ ಕನಸಿನಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಊಟ ,ನಿದ್ದೆ, ಬಿಟ್ಟು ಶ್ರಮದಿಂದಲೇ ಸಮಾಜದ ಸಮೃದ್ಧಿ ಯೋಗಿಯಾಗಿ ಹೊಸ ದಿಗಂತ ನೋಡಿದ ಕಣ್ಮಣಿಗಳು.



ಹಸಿವು ಮತ್ತು ಅವಮಾನಗಳು ನಮ್ಮ ಮುಖಪುಟವನ್ನೇ ಬದಲಾಯಿಸಿ ಅಳುವ ಧ್ವನಿಗೆ, ಮರಗುವ ಮನಸ್ಸಿಗೆ, ಕೊರಗುವ ಎದೆಗೆ ಗದೆ ಹಿಡಿದು, ಜೀವನದ ಯುದ್ಧ ಗೆಲ್ಲುವ ಸಾಹಸದ ಸಾಧನಕಾರರೇ ಶ್ರಮಿಕರು, ದುಡಿಮೆಯ ಮಿತ್ರನು ಹೌದು. ಬಡವ ಬಲ್ಲಿದ ನಡುವೆ ಹೃದಯ ತಟ್ಟಿದ ನೆನಪುಗಳು, ನಮ್ಮ ದುಡಿಯುವ ಕೈಗಳಿಗೆ ನೆರಳಾಗಬೇಕಾದರೆ ಮನಸ್ಸು ತಟ್ಟುವ ಕನಸು ಕಂಡು, ಸಮ ಸಮಾಜದಲ್ಲಿ ಹೊಸ ಅಧ್ಯಾಯ ಬರೆಯಲು, ನಮ್ಮ ನಿರ್ಗತಿಕ ಪರಿಸ್ಥಿತಿಯಲ್ಲೂ ನೈಜ್ಯತೆ ಮನಗಂಡು. ನಮ್ಮ ಬದುಕಿನ ಪ್ರವಾಹಗಳನ್ನು ಎದುರಿಸಿ, ಸುಗಮ ಪಯಣಕ್ಕೆ ಜೀವನದ ದಡ ಸೇರಲು, ಕಷ್ಟದ ನದಿ ದಾಟಲು, ಬಿಸಿಲಿನ ತಾಪದಲಿ ಬದುಕಿನ ಆಶಯದಲಿ ಅನುಕೂಲದ ನೆರಳನ್ನು ಹುಡುಕುವ ತವಕದಲ್ಲಿ, ಭಾವುಕರಾಗಿ ಬದುಕುವ ಜೀವ ಜೀವನದ ಮಧ್ಯೆ ಬಿರುಗಾಳಿಯನ್ನೇ ಎದುರಿಸಿ, ಬದುಕ ಬವಣೆ ಮೆಟ್ಟಿ ನಿಲ್ಲುವ ಬಡತನವೇ ನಮಗೆ ಬಂಡಾಯವಾಗುತ್ತದೆ.

ಬಿಸಿಲು ಮರದಲ್ಲಿ ನೆರಳಿನ ಚಿಂತೆ, ಈಚಲ ಗಿಡದ ಕೆಳಗೆ ಯುವಕರ ಸಂತೆ, ಭವಿಷ್ಯತ್ ಕಣ್ಣಿಗೆ ಪರದೆ ಎಳೆಯುತ್ತಿದೆ. ಇಲ್ಲಿ ಅನ್ನ ,ಅಕ್ಷರ, ಪದವಿ, ಮದುವೆ ಹಣ ಅಧಿಕಾರ ಅಂತಸ್ತಿನ ಪ್ರತಿಷ್ಠೆಗಳೆ ನಮ್ಮನ್ನು ಹಿಂದೆ ತಳ್ಳುತ್ತದೆ. ನಮ್ಮ ಪೂರ್ಣ ವಯಸ್ಸು ಕಳೆದು ,ಕಣ್ಣು ಕವಡೆಯಾಗಿ, ಹಲ್ಲು ದವಡೆಯಲ್ಲಿ ಉದುರಿ, ಚರ್ಮದ ಸುಂಕಗಟ್ಟಿ ನಿತ್ಯವೂ ದುಡಿದರು ಜೀವನದ ಯಶಸ್ಸು ಕಾಣದೆ ಕನಸಾಗಿ ಕಳೆಯುತ್ತಿದ್ದೇವೆ .ಜೀವನ ಪೂರ್ತಿ ಹೊಟ್ಟೆ, ಬಟ್ಟೆ, ಕಟ್ಟಿ ಹೆಂಡತಿ ,ಮಕ್ಕಳು, ಮನೆ ಮದುವೆ ಅಂತಲೇ ಇರುವ ವಯಸ್ಸಿನಲ್ಲೇ ದೇಹವೇ ಸೊರಗಿಸಿದೆವು. ಇದ್ದವರನ್ನು ಇದ್ದವರನ್ನಾಗಿ ಮಾಡಿ .ನಾವು ಮಾತ್ರ ಹಸಿವಿಗೆ ಅನ್ನ ಹುಡುಕತಲೆ ವಾಸಕ್ಕೆ ಸೂರು ಇಲ್ಲದೆ ,ಕಾಲಕಾಲಕ್ಕೆ ಶ್ರಮದ ತ್ಯಾಗ ಮಾಡುತ್ತಲೆ ತಾಳ್ಮೆಯಲೇ ನಂಬಿಕೆ, ವಿಶ್ವಾಸದಲ್ಲಿ ತಾಳಿ ಬಾಳುತ್ತಾ ಬಂದಿದ್ದೇವೆ.

ವೆಂಕಣ್ಣ ಜೆ.ಪಿ ಹೇಳುವಂತೆ 'ಗೆಲುವು ಹಿಂದೆ ಪ್ರಯತ್ನದ ಸಾಧನೆ ಉಂಟು, ಸೋಲು ಮುಂದೆ ಮರು ಪ್ರಯತ್ನ ಉಂಟು,' ಎಂದಿದ್ದಾರೆ ಅದರಂತೆ ನಾವು ಬಡತನದಲ್ಲಿ ಅನ್ನ, ಬಟ್ಟೆ ವಸತಿಗಾಗಿ ಕಾರ್ಮಿಕರನ್ನಾಗಿಯೂ ಕೂಲಿಯಾಗಿಯೂ, ರೈತ ಕಾರ್ಮಿಕನಾಗಿಯೂ ಹತ್ತು ಹಲವು ಕ್ಷೇತ್ರದಲ್ಲಿ ಅರ್ಹತೆಗೆ ತಕ್ಕಂತೆ, ಸಾಮರ್ಥ್ಯಕ್ಕೆ ತಕ್ಕಂತೆ, ಯೋಗ್ಯತೆ ಮೀರಿ, ಬೆವರ ಹನಿ ನೆಲಕ್ಕೆ ಚೆಲ್ಲಿ ಈ ಮಣ್ಣಲ್ಲಿ ಮಣ್ಣಾಗಿ ದುಡಿದು ದುಡಿದು ಧ್ರುವತಾರೆಯಂತೆ ಕೃಷಿ ಕೈಗಾರಿಕೆ ಸೇವಾ ಕ್ಷೇತ್ರದಲ್ಲಿ ಉದ್ಯಮವನ್ನು ಬೆಳಸಿದ್ದಾನೆ. ಅಸಿ ಮಸಿ ಕೃಷಿಯಿಂದಲೇ ನಮ್ಮ ಅಭಿವೃದ್ಧಿಯ ಮಂತ್ರವಾಗಬೇಕೆಂದು ಡಾಕ್ಟರ್ ಪಂಡಿತ್ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ. ಬಡತನ ಒಂದು ಶಾಪವಲ್ಲ ಬಡತನವೆ ಒಂದು ವರವೆಂದು ,ಅನೇಕ ಯುಗ ಪ್ರವರ್ತಕರು, ಸಾಧಕರು ಯೋಜನೆ ಯೋಚನೆಯನ್ನು ಕಠಿಣ ಶ್ರಮದಿಂದ ಗುಡಿ ಕೈಗಾರಿಕೆಗಳು ಪುನರ್ಜೀವನ ನೀಡಿದರೆ, ಬಹುಜನರ ನಿರೀಕ್ಷೆಯಂತೆ ಸುಭಿಕ್ಷೆಯ ಕಾಲ ಬರಲು ಪ್ರತಿಯೊಬ್ಬ ಪ್ರಜೆಯೂ ಎದೆ ಬಡಿತದಲ್ಲಿ ಮಿಡಿಯಬೇಕು. ಇಂದು ಬಡವರ ಕನಸಿಗೆ ಪರದೆ ಎಳೆದು ಅವರ ಹಕ್ಕುಗಳಿಗೆ ಕನ್ನ ಹಾಕುವುದನ್ನು ತಡೆಯಬೇಕಾಗಿದೆ . ನೈತಿಕತೆ ಮೀರಿ, ಅಂಕೆತಪ್ಪಿ ಬಡವರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವುದನ್ನು ತಡೆಯಬೇಕು. ಉಣ್ಣುವ ಅನ್ನಕ್ಕೆ ಮಣ್ಣು ಹಾಕುವವರಿಗೆ ಶ್ರಮದ ಮಹತ್ವ ತಿಳಿಸಬೇಕಾಗಿದೆ . ಬಸವಣ್ಣನವರ ಕಾಯಕವೇ ಕೈಲಾಸ ಎಂದು ತಿಳಿಸಿ ಶ್ರಮದ ತ್ಯಾಗದಿಂದಲೇ ಉಳ್ಳವರು ತಮ್ಮ ಬದುಕಿನ ಬೆಳಕು ಕಂಡಿದ್ದಾರೆ. ರೈತ ಬೆಳೆದರು ಬೆಳೆದ ಧಾನ್ಯ ಉಣ್ಣದ ನತದೃಷ್ಟನು ,ಚಪ್ಪಲಿ ಒಲಿದರು ಚಪ್ಪಲಿ ಇಲ್ಲದೆ ತಾನು ನಡೆಯುವ ಅಮಾಯಕರು, ಬಟ್ಟೆ ನೇಯ್ದರು ತಾವು ಅರಬೆತ್ತಲೆಯ ಪಾಪಿಷ್ಟರು. ಉಳ್ಳವರ ಸುಖ ನಿದ್ದೆಗೆ ,ನಾವು ನಿದ್ದೆಗೆಟ್ಟ ಕಾವಲುಗಾರರು. ನಾವು ಕತ್ತಲಲ್ಲಿ ಇದ್ದು ಬೇರೆಯವರಿಗೆ ಬೆಳಕು ನೀಡಿ ಸಂತಸ ಪಡುವ ಅನಾಥರು. ನಾವು ಅಬಲರು ಆದರೂ ಪರವಾಗಿಲ್ಲ ಇದ್ದವರಿಗೆ ಸೌಲಭ್ಯ ಕಲ್ಪವೃಕ್ಷ ನೀಡುವ ವೃಕ್ಷಗಳು ನಮ್ಮವರು ಆದರೆ ನೀವು ದುಬಾರಿ ಜೀವನ ನಡೆಸಿ ನಮಗೆ ದುರ್ಬಲ ಗಳಿಗೆ ತಂದಿದ್ದೀರಿ. ನಿಮಗೆ ಇದು ಒಳ್ಳೆಯದಲ್ಲ ಅಮಾನವಿಯ ವರ್ತನೆ ವಿರುದ್ಧ ಎದ್ದು ನಿಂತರೆ ನಿಮ್ಮ ಗತಿಯನ್ನು ಚಿಂತಿಸಿದ್ದೀರಾ.

ಸುಕನ್ಯಾ ಮಾರುತಿ ಹೇಳುವಂತೆ 'ನಮ್ಮನ್ನು ಏಣಿಯಾಗಿ ಮಾಡಿಕೊಂಡು, ನೀವು ಮೇಲೆ ಏರಿದ್ದೀರಿ, ಮೇಲೆ ಏರಿದವರು ಕೆಳಗೆ ಬರಲೇಬೇಕು, ನೀವು ಹೇಗೆ ಕೆಳಗೆ ಬರುತ್ತೀರಿ ನಾವು ನೋಡುತ್ತೇವೆ ' ಎನ್ನುವ ಹೇಳಿಕೆಯಂತೆ .ನಿಮ್ಮ ಕಡುಕಷ್ಟದಲ್ಲಿ ನಮ್ಮ ದಾರಿದ್ರವೇ ನಿಮ್ಮನ್ನು ಸಂತೈಸುತ್ತದೆ .ನಿಮ್ಮ ಕಟು ನುಡಿಗಳನ್ನು ನಾವು ಕೇಳಿಸಿಕೊಳ್ಳಬೇಕಾಗಿದೆ. ನಮ್ಮ ಕಡು ಕಷ್ಟಗಳನ್ನು ಅಳಿಸಿಕೊಳ್ಳಬೇಕಾಗಿದೆ . ನಿಮ್ಮ ಆಶ್ರಯದಲಿ ನಾವು ಶ್ರಮಿಸಬೇಕಾಗಿದೆ. ನಾವು ಗುಲಾಮರಲ್ಲ, ಗುಲಾಬಿಯಂತೆ ಅರಳಬೇಕಾದವರು, ನಾವು ಹೊಸ ದಿಗಂತದ ಕಡೆ ಮುನ್ನುಗ್ಗಿ ಸಾಗಬೇಕಾಗಿದೆ ಆಗ ಮಾತ್ರ ನಿಮ್ಮ ಭವಿಷ್ಯತ್ ಬದಲಾಗುತ್ತದೆ. ನೀವು ವಾಮಮಾರ್ಗದಲ್ಲೇ ನುಸಳಿ ಮೊಸಳೆ ಕಣ್ಣೀರಲ್ಲಿ ನಮ್ಮನ್ನು ಬಂಧಿಸಿದ್ದೀರಿ .ಮಂತ್ರಕ್ಕೆ ಮಾವಿನ ಕಾಯಿ ಉದುರಿಸಿದ್ದು ಸಾಕು, ಅಭಿವೃದ್ಧಿಯ ದಾರಿ ಹುಡುಕಬೇಕಾಗಿದೆ. ಸತ್ಯ, ನ್ಯಾಯ, ನೀತಿ, ಪಾಠ ಕಲಿತು ಅಳವಡಿಸಿ ಕೊಳ್ಳಬೇಕಾಗಿದೆ. ಆಧುನಿಕ ಸೋಗಿನಿಂದ ಹೊರಬರಬೇಕಾಗಿದೆ. ಇಂದು ತಂಗಳ ಪೆಟ್ಟಿಗೆ ಅನ್ನ ಹಳಸಿದೆ, ಆಧುನಿಕ ತಂತ್ರವನ್ನು ಜ್ಞಾನ, ವಿಜ್ಞಾನ, ಶಿಕ್ಷಣ ಅರಿವು ಶ್ರೀಸಾಮಾನ್ಯರಿಗೂ ಬೇಕಾಗಿದೆ.

ಒಂದೇ ಗೂಡಿನ ಹಕ್ಕಿಗಳನ್ನು ಕಾಡಿಗೆ ಕಳುಹಿಸಿ ನೀವು ಮಾಡುತ್ತಿರುವುದೇನು? ದಾನವರೆಲ್ಲ ಮಾನವರಾಗಿ ಬದುಕಬೇಕಾಗಿದೆ. ನಮ್ಮನ್ನು ನೀವು ಶೋಷಿಸಿದ್ದು ತರವಲ್ಲ ನಿಮ್ಮನ್ನು ನಾವು ದೋಷಿಸುವುದು ಸರಿಯಲ್ಲ. ನಾವು ಕುರುಡರಾಗಿ ಗುಡಿಸಿಲಲ್ಲಿ ಹುಟ್ಟಿ ಗುಡಿಸಲಲ್ಲಿ ಕಾಣೆಯಾಗಿದ್ದೇವೆ. ಇಂದು ನಾವು ಸ್ವಾಮಿ ವಿವೇಕಾನಂದರ ವಾಕ್ಯವನ್ನು ನೆನಪಿಸಿಕೊಳ್ಳಬೇಕಾಗಿದೆ ಭಾರತದ ಭವಿಷ್ಯ ಗುಡಸಿನಲ್ಲಿ ಅಡಗಿದೆ ಎನ್ನುವ ಮಾತು ಸತ್ಯ ಮತ್ತು ವಾಸ್ತವವಾಗಿದೆ. ದುಡಿಮೆಗೆ ಕಣ್ಣುಗಳಿವೆ, ಪ್ರತಿಭೆಗೆ ಕಿವಿಗಳಿವೆ , ಪ್ರಯತ್ನಕ್ಕೆ ಸ್ಪರ್ಶವಿದೆ, ಕಾಯಕದ ಕೈಲಾಸವು ನಮಗೆ ಸಂಪೂರ್ಣ ಚಿತ್ರಣವಿದೆ, ಹೊಸತನದ ಹೊಸ ದಿಗಂತದ ಅಮಂತ್ರಣವಿದೆ , ಇಲ್ಲಿ ಜನ ಗಣ ಮನವು ಸಂತೃಪ್ತಿ ಮನಸ್ಸಿನಿಂದ ಆಚರಣೆಗೆ ಒಳಪಡಿಸಬೇಕು. ಆಗ ಮಾತ್ರ ನಾವು ಸ್ವಾತಂತ್ರರು ಸಮಾನರು, ಎಲ್ಲರ ನಗುವಿನ ರಂಗೋಲಿಯ ಶೃಂಗಾರದ ಅಂಗಳದಲಿ ಬಾವ್ಯಕ್ಯತೆಯ ಹಾಡಿಗೆ ಗೆ ಕುಣಿಯಬೇಕು.



ಗುರಿ ಶಿಖರದ ಮೇಲೆ ಬಡವನ ಕಣ್ಣು ಗರಿಗದರಿ ನಿಂತ ಮರಗಳ ಹಣ್ಣು ಕವಡೆಯ ಕಣ್ಣಲ್ಲೇ ನೂರೊಂದು ಆಸೆಗಳನ್ನೇ ಬಿತ್ತಿ, ನೆತ್ತಿಯ ಮೇಲೆ ತೂಗು ಗತ್ತಿ ನಿಂತಿದೆ. ಇದರಿಂದ ತಪ್ಪಿಸಿ ನಿಮ್ಮಲ್ಲಿ ನಾವು ಅಪ್ಪಿ ಬಾಳಬೇಕಾದರೆ ಮೊದಲು ನಮ್ಮ ಉತ್ಸಾಹ ವಿಶ್ವಾಸವಿರಬೇಕು. ಉತ್ತಮ ಗುಣ ಹೊಂದಿ, ಪ್ರೀತಿ ಕರುಣೆ ಅನುಕಂಪ ,ಉಸಿರು ಉಸಿರಲ್ಲೂ ಹೆಸರು ಹೇಳಬೇಕು. ಸಂಸ್ಕಾರದ ಸಂಸ್ಕೃತಿಯ ಶಿಕ್ಷಣ ಸಿಗಬೇಕು. ನೊಂದು ಸೋತವರಿಗೆ ಸಾಂತ್ವನದ ಶಿಕ್ಷಣ, ಕ್ರಾಂತಿಯ ಶಿಕ್ಷಣ, ನಮ್ಮ ಮುಖಲಕ್ಷಣ ಬದಲಿಸಿ, ನೆಮ್ಮದಿ ಬಾಳಲ್ಲಿ ಶಾಂತಿ ನೆಲೆಸಬೇಕು ಆದರೆ ಪ್ರತಿ ಕುಟುಂಬದಲ್ಲಿ ಕೌಟುಂಬಿಕ ನೆಲೆಯನ್ನೇ ಕದಲಿಸಿ, ಶಿಕ್ಷಣ ವ್ಯಾಪಾರವಾಗಿ ,ರಾಕ್ಷಸ ಪ್ರವೃತ್ತಿ ಬೆಳೆಸುತ್ತಿದೆ .ನಮ್ಮ ಮಕ್ಕಳೇ ನಮ್ಮನ್ನೇ ಅನಾಥ ಆಶ್ರಮಕ್ಕೆ ಕಳುಹಿಸಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಅಂಕದ ಸುಂಕದ ನಡುವೆ ಇಂಕು ಮಂಕಾಗುತ್ತದೆ . ಸ್ವಾಭಿಮಾನವನ್ನೆ ಕಳೆದ ಯುವಕರ ಪಡೆ ಉದ್ವೇಗದ ಚಿಂತನೆಗೆ ಬಿದ್ದು ಆಯುಷ್ಯವನ್ನೇ ಕಡಿಮೆ ಮಾಡಿಕೊಳ್ಳುವ ಶಿಕ್ಷಣ ನಮಗೆ ಬೇಡ .ಅಂಗೈಯಲ್ಲಿ ಚಂದಿರನನ್ನೇ ತೋರಿಸಿ ಮುಂಗೈಯಲ್ಲಿ ಆಕಾಶವನ್ನೇ ಕತ್ತರಿಸಿ ವಿಷಯಕ್ಕೆ ಮಾರುಹೋಗಿ ಭೂಮಿ ಆಕಾಶಕ್ಕೆ ಏಣಿ ಹಾಕುವುದು ಸರಿಯೇ!. ಹಣ ದುಡಿಯುವ ಕೈಯಲ್ಲಿದೆ , ಶಾಂತಿ ಗುಣವಂತರ ಹೃದಯದಲ್ಲಿದೆ, ಶ್ರಮದ ತ್ಯಾಗದಿಂದಲೇ ಅಭಿವೃದ್ಧಿಯ ನಕ್ಷತ್ರ ಮಿನುಗುತ್ತದೆ. ಕ್ಷಣಿಕ ಸುಖದ ಹಿಂದೆ ಬಿದ್ದು ದೀರ್ಘಾಯುಷ್ಯವನ್ನೇ ಕಳೆಯಲು ಮೂರ್ಖತನ ಇಂದು ನಾವು ನೀವು ಕೈ ಬಿಡಬೇಕಾಗಿದೆ. ನಮ್ಮ ಬೆವರಿನ ಹನಿ ಪನ್ನೀರ ಕೊಳವಾಗಿ ಬಳಸಿ. ನಮ್ಮ ಎಲುಬಿನ ಹಂದರದ ಮೇಲೆ ಮಹಲು ಕಟ್ಟಿದ್ದೀರಿ ಆದರೆ ನಾವು ಮಾತ್ರ ಮುಂದಿನ ಭರವಸೆ ನೋಡಿಕೊಂಡು ಇಂದೋ ನಾಳೆಯೋ ನಮ್ಮ ಸಮಯ ಬದಲಾಗಬಹುದೆಂದು ಮುಂದೆ ನೋಡುತ್ತಾ ಆಕಾಶಕ್ಕೆ ಮುಖ ತಿರುಗಿ ನಿತ್ಯ ಶ್ರಮದ ತ್ಯಾಗದಿಂದಲೇ ಹೊಸ ದಿಂಗಂತದ ನೋಡಿದರೂ ಬದುಕನ್ನು ಕಲ್ಲು ಮಣ್ಣಿನ ಜೊತೆ ಬರುವ ದಿನಗಳನ್ನು ಅಕ್ಷರ, ಅನ್ನ , ವಸತಿ ಶಿಕ್ಷಣಕ್ಕೆಂದೇ ಮೂಡಣದ ದಿಕ್ಕನ್ನು ಕಣ್ಣು ತೆರೆದು ನೋಡುತ್ತೇವೆ.

ಬಡವರ ಭವಿಷ್ಯಕ್ಕೆ ರೆಕ್ಕೆ ಪುಕ್ಕಗಳನ್ನು ಬಿಚ್ಚಿ ಮನಸ್ಸಿಂದ ಸ್ವಚ್ಛ ಮನೆಯಿಂದ ಯಥೇಚ್ಛ ಮನಿಯಿಂದ ಒಂದೆ ಜೀವನದಲ್ಲಿ ಒಂದೇ ಗುರಿಯ ಹೊಂದಿ ಹಲವು ದಿಕ್ಕಗಳಲ್ಲಿ ಬಡವನ ಹೊಸ ದಿಗಂತಕ್ಕೆ ಶ್ರಮಿಕರೇ ದೊರೆಗಳು ಶ್ರಮಿಕರೆ ನಾಗರಿಕರು ದುಡಿದು ತಿನ್ನುವ ಅನ್ನದ ರುಚಿ ದೇವಲೋಕದ ಅಮೃತಕ್ಕೆ ಸಮನಾಗಿ ಉಂಡಿದ್ದು. ನಮ್ಮ ಹೆಗಲಿಗೆ ನಿಮ್ಮ ಹೆಗಲು ಸೊಗಸಾಗಿ ಕಂಡಿದ್ದು ಒಟ್ಟಾರೆ ಕೈಲಾಗದು ಎಂದು ಕೈಕಟ್ಟಿ ಕೂಡದೆ ನಮ್ಮ ಶ್ರಮದ ತ್ಯಾಗದಿಂದಲೇ ಹೊಸ ದಿಗಂತ ಕಂಡವರು. ಹಗಲು ರಾತ್ರಿಗೆ ಅರ್ಥ ನೀಡಿದವರು. ಸೂರ್ಯ ಚಂದ್ರನಿಗೆ ಮೆಚ್ಚುಗೆ ಆದವರು, ಲೋಕಾಮೃತದ ಕಲ್ಯಾಣಕ್ಕೆ ಸರಿಸಾಟಿಯಾಗಿ ನೆಲೆ ನಿಂತವರು, ಆರ್ಥಿಕತೆಗೆ ಬೆನ್ನೆಲುಬಾಗಿ ದಿನ ದಿನಕ್ಕೆ ಅವಲಂಬನೆಯಾಗದೇ ಸ್ವಾವಲಂಬಿಗಳಾಗಿ ಬದುಕು ಸಾಗಿಸಿದವರು.

**– ಜಿ ಯರಿಸ್ವಾಮಿ ಸಂಕ್ಲಾಪುರ**

# ಮಾತೆಂಬುದು ಜ್ಯೋತಿರ್ಲಿಂಗ

**ಲೋಹಿತೇಶ್ವರಿ ಎಸ್ ಪಿ**

ಮಾತು ಮೌನಕ್ಕಿಂತ ಹರಿತವಾದುದು. ನಮ್ಮ ಪೂರ್ವಿಕರು ಹಿಂದಿನಿಂದಲೂ ಮಾತು ಬೆಳ್ಳಿ ಮೌನ ಬಂಗಾರ ಎನ್ನುತ್ತಾ ಮಾತಿನಿಂದ ಹೇಳಲಾಗದೇ ಇರುವುದನ್ನು ಮೌನದಿಂದ ತಿಳಿಸಬಹುದೆಂದು ಹೇಳುತ್ತಲೇ ಬಂದಿದ್ದಾರೆ. ಅದು ಎಷ್ಟರಮಟ್ಟಿಗೆ ನಿಜವೆಂದು ಕೂಲಂಕಷವಾಗಿ ಪರಿಶೀಲಿಸಿದಾಗ ಸತ್ಯಾಂಶ ಅರಿವಿಗೆ ಬರುತ್ತದೆ. ಹಿರಿಯರಿಂದ ಮಕ್ಕಳಿಗೆ ಮೌನವೇ ಶ್ರೇಷ್ಠ ಎಂಬ ತಿಳಿವಳಿಕೆ ದೊರೆಯುತ್ತಾ ಬಂದಿದೆ.. ಆದರೆ, ಅದು ನಿಜವಾ..? ಸುಳ್ಳಾ...? ಎಂದು ಅರಿಯುವುದು ಮಕ್ಕಳ ಜವಾಬ್ದಾರಿ. ನಮ್ಮ ಪೂರ್ವಿಕರಲ್ಲಿ ಮೌನದ ಮೂಲಕವೇ ಭಾವನೆಗಳನ್ನು ಅರ್ಥ ಮಾಡಿಸುವ ನೈಪುಣ್ಯತೆಯೊಂದಿಗೆ ಮೌನವನ್ನು ಅರ್ಥಮಾಡಿಕೊಳ್ಳುವ ಮನೋಭಾವವೂ ಇತ್ತು. ಆದರೆ, ಪ್ರಸ್ತುತ ದಿನಗಳಲ್ಲಿ ಮೌನವನ್ನು ಅಪಾರ್ಥ ಮಾಡಿಕೊಳ್ಳುವ, ಇಚ್ಛಾನುಸಾರ ಅರ್ಥೈಸಿಕೊಳ್ಳುವ, ಅಸಹಾಯಕತೆಯ ಪ್ರತಿರೂಪವಾಗಿ ಪರಿಗಣಿಸುವುದೆ ಹೆಚ್ಚು. ಅಭಿಪ್ರಾಯಗಳನ್ನು ಧೈರ್ಯದಿಂದ ಹೊರಹಾಕಿದಾಗ ಮಾತ್ರ ಅವುಗಳಿಗೆ ಮೌಲ್ಯ. ಇಲ್ಲವಾದಲ್ಲಿ ನಗೆಪಾಟಲಿಗೆ ಈಡಾಗುವ ಇಲ್ಲವೆ ಸಂಕಷ್ಟಕ್ಕೆ ಒಳಗಾಗುವ ಸಂದರ್ಭ ಒದಗಿಬರುತ್ತದೆ.

ಮಾತು ಮನೆಕೆಡಿಸಿತು ತೂತು ಒಲೆ ಕೆಡಿಸಿತು
ಮಾತು ಬೆಳ್ಳಿ ಮೌನ ಬಂಗಾರ
ಮಾತಾಡಿದರೆ ಮುತ್ತಿನಂತಿರಬೇಕು
ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು
ಮಾತಿಗಿಂತ ಮೌನವೇ ಮಿಗಿಲು

ಇಂತಹ ಉಕ್ತಿಗಳ ಮೂಲಕ ನೆಗೆಟಿವ್ ಶೇಡ್ ಕೊಟ್ಟು ಮಾತನ್ನು ಅಪರಾಧಿ ನೆಲೆಯಲ್ಲಿಟ್ಟು ನೋಡುವ ಪರಿಪಾಠ ಇಂದಿಗೂ ಜೀವಂತವಾಗಿದೆ. ಆದರೆ, ಅಲ್ಲಮಪ್ರಭುಗಳು ಹೇಳಿರುವ ಮಾತೆಂಬುದು ಜ್ಯೋತಿರ್ಲಿಂಗ ಎಂಬ ಮಾತನ್ನು ಯಾರು ಬಳಸುವುದಿಲ್ಲ. ಈ ಮಾತನ್ನು ಕನ್ನಡ ವಿಶ್ವವಿದ್ಯಾಲಯದ ಘೋಷವಾಕ್ಯವಾಗಿ ನೋಡಬಹುದು. ಇಲ್ಲಿ ಮಾತನ್ನು ಬದುಕನ್ನು ರೂಪಿಸಿಕೊಳ್ಳಲು ದಾರಿಯಾಗಿ, ಶಕ್ತಿಯಾಗಿ, ಬಂಡವಾಳವಾಗಿ ಹಾಗೂ ಯಶಸ್ಸಿನ ಮಾರ್ಗವಾಗಿ ಪ್ರತಿನಿಧಿಸಲಾಗಿದೆ. ಮಾತಿನ ಮೂಲಕವೇ ನಮಗೆ ಬೇಕಾದುದನ್ನು ಪಡೆಯುವ, ಬೇಡವಾದುದನ್ನು ತಿರಸ್ಕರಿಸುವ ಹಾಗೂ ಧಿಕ್ಕರಿಸುವ ಚಾತುರ್ಯವನ್ನು ಬೆಳೆಸುವಲ್ಲಿ ಕನ್ನಡ ವಿಶ್ವವಿದ್ಯಾಲಯದ ಸಕ್ರೀಯವಾಗಿದೆ.

ಮಾತು ಮೌನಕ್ಕಿಂತಲೂ ಪ್ರಖರವಾದದ್ದು. ಶಕ್ತಿಯುತವಾದದ್ದು. ನಾವು ಮೌನಕ್ಕೆ ಶರಣಾದರೆ ಪಡೆದುಕೊಳ್ಳುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು. ಅದೇ ಮಾತನಾಡಿದರೆ ನಮ್ಮ ಇರುವಿಕೆಯನ್ನು ಸಾಧಿಸಲು, ಅನಿಸಿದ್ದನ್ನು ನೇರವಾಗಿ, ಧೈರ್ಯದಿಂದ ಹೇಳಲು ಸಾಧ್ಯವಿದೆ. ಇಲ್ಲವಾದಲ್ಲಿ ಬೇರೆಯವರ ಇಚ್ಛೆಗೆ ಅನುಗುಣವಾಗಿ ನಾವು ಜೀವಿಸುವ ಸಂದರ್ಭ ಎದುರಾಗಬಹುದು.

ಜಗದಲ್ಲಿನ ಇಡೀ ಜೀವಸಂಕುಲದಲ್ಲಿಯೇ ಮಾನವರಿಗೆ ದೊರೆತ ಅತ್ಯಂತ ಮೌಲ್ಯಯುತ ಸಾಧನ ಮಾತು/ನುಡಿ. ಮಾತಿನ ಮೂಲಕವೇ ನಮ್ಮ ವ್ಯಕ್ತಿತ್ವ ಎಂತಹದು ಎಂಬುದನ್ನು ಗುರುತಿಸಿಕೊಳ್ಳಬೇಕೇ ವಿನಃ ಮೌನಕ್ಕೆ ಶರಣಾಗಿ ವ್ಯಕ್ತಿತ್ವಕ್ಕೆ ಮಸಿಬಳೆದುಕೊಳ್ಳಬಾರದು.....

## ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.






ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

# ಬಳ್ಳಾರಿ ಲೋಕಸಭೆಗೆ 8 ವಿಧಾನಸಭಾ ಕ್ಷೇತ್ರ

## ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ವಿಜಯನಗರ, ಕಂಪ್ಲಿ, ಬಳ್ಳಾರಿ ಗ್ರಾಮೀಣ, ಬಳ್ಳಾರಿ ನಗರ, ಸಂಡೂರು ಹಾಗೂ ಕೂಡ್ಲಿಗಿ

## ಬಳ್ಳಾರಿ ಲೋಕಸಭಾ ಚುನಾವಣೆಗೆ 9,51,522 ಮಹಿಳಾ ಮತದಾರರು, 9,25,961 ಪುರುಷರು, 268 ಲಿಂಗತ್ವ

## ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 18,77,751 ಮತದಾರರು, 1972 ಮತಗಟ್ಟೆ ಸ್ಥಾಪನೆ: ಡಿಸಿ ಮಿಶ್ರಾ ಮಾಹಿತಿ


■ ಹಂಪಿ ಟೈಮ್ಸ್ ಬಳ್ಳಾರಿ

09 – ಬಳ್ಳಾರಿ (ಪ.ಪಂ) ಲೋಕಸಭೆ ಮೀಸಲು ಕ್ಷೇತ್ರದಲ್ಲಿ 2024 ರ ಏಪ್ರಿಲ್ 04 ರ ಮತದಾರರ ಪಟ್ಟಿಯನ್ವಯ ಒಟ್ಟು 18,77,751 ಮತದಾರರಿದ್ದಾರೆ. ಒಟ್ಟು 1972 ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

**ಅಖಂಡ ಬಳ್ಳಾರಿ ಲೋಕಸಭಾ ಕ್ಷೇತ್ರ:**

09–ಬಳ್ಳಾರಿ (ಪ.ಪಂ) ಲೋಕಸಭಾ ಕ್ಷೇತ್ರವು ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ವಿಜಯನಗರ, ಕಂಪ್ಲಿ, ಬಳ್ಳಾರಿ ಗ್ರಾಮೀಣ, ಬಳ್ಳಾರಿ ನಗರ, ಸಂಡೂರು ಹಾಗೂ ಕೂಡ್ಲಿಗಿ ಸೇರಿದಂತೆ ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ವಿಧಾನಸಭಾ ಕ್ಷೇತ್ರವು ಮಾತ್ರ ಕೊಪ್ಪಳ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದೆ.

ಅಖಂಡ (ವಿಜಯನಗರ ಜಿಲ್ಲೆ ಸೇರಿ) ಜಿಲ್ಲೆಯಲ್ಲಿ 9,51,522 ಮಹಿಳಾ ಮತದಾರರೇ ಹೆಚ್ಚಿದ್ದು, 9,25,961 ಪುರುಷ ಮತದಾರರು ಹಾಗೂ 268 ಜನ ಲಿಂಗತ್ವ ಅಲ್ಪಸಂಖ್ಯಾತ ಮತದಾರರಿದ್ದಾರೆ. ಇದರಲ್ಲಿ 53,169 ಯುವ ಮತದಾರರು, 24,841 ವಿಶೇಷಚೇತನ ಮತದಾರರು ಮತ್ತು 13,285 ಜನ 85 ವರ್ಷ ಮೇಲ್ಪಟ್ಟ ವಯಸ್ಕ ಮತದಾರರಿದ್ದಾರೆ ಎಂದು ಹೇಳಿದ್ದಾರೆ.



**ಬಳ್ಳಾರಿ ಜಿಲ್ಲೆ ಕ್ಷೇತ್ರವಾರು ಮತದಾರರ ವಿವರ:**

**ಕಂಪ್ಲಿ ಕ್ಷೇತ್ರ:**

91–ಕಂಪ್ಲಿ ವಿಧಾನಸಭಾ ಕ್ಷೇತ್ರದಲ್ಲಿ 1,10,119 ಪುರುಷ ಮತದಾರರು, 1,13,006 ಮಹಿಳಾ ಮತದಾರರು ಹಾಗೂ 35 ಜನ ಲಿಂಗತ್ವ ಅಲ್ಪಸಂಖ್ಯಾತ ಮತದಾರರು ಸೇರಿ ಒಟ್ಟು 2,23,160 ಮತದಾರರಿದ್ದಾರೆ. ಅದರಲ್ಲಿ 7011 ಯುವ ಮತದಾರರು, 1158 ಜನ 85 ವರ್ಷ ಮೇಲ್ಪಟ್ಟ ವಯಸ್ಕ ಮತದಾರರು, 4,317 ವಿಶೇಷ ಚೇತನ ಮತದಾರರು ಮತದಾರರಿದ್ದಾರೆ. ಈ ಕ್ಷೇತ್ರದಲ್ಲಿ ಒಟ್ಟು 242 ಮತಗಟ್ಟೆಗಳಿವೆ.

**ಬಳ್ಳಾರಿ ಗ್ರಾಮೀಣ ಕ್ಷೇತ್ರ:**

93–ಬಳ್ಳಾರಿ ಗ್ರಾಮೀಣ ವಿಧಾನಸಭಾ ಕೇತ್ರದಲ್ಲಿ 1,20,964 ಪುರುಷ ಮತದಾರರು, 1,28,388 ಮಹಿಳೆ ಮತದಾರರು ಹಾಗೂ 51 ಜನ ಇತರೆ ಮತದಾರರಿದ್ದು, ಒಟ್ಟು 2,49,403 ಮತದಾರರಿದ್ದಾರೆ. ಅದರಲ್ಲಿ 7,907 ಯುವ ಮತದಾರರು, 1,720 ಜನ 80 ವರ್ಷ ಮೇಲ್ಪಟ್ಟ ವಯಸ್ಕ ಮತದಾರರು, 2,995 ವಿಶೇಷಚೇತನ ಮತದಾರರು ಮತದಾರಿದ್ದಾರೆ. ಇಲ್ಲಿ ಒಟ್ಟು 235 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

**ಬಳ್ಳಾರಿ ನಗರ ಕ್ಷೇತ್ರ:**

94–ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ 1,31,405 ಪುರುಷ ಮತದಾರರು, 1,40,211 ಮಹಿಳೆ ಮತದಾರರು ಮತ್ತು 34 ಲಿಂಗತ್ವ ಅಲ್ಪ ಸಂಖ್ಯಾತ ಮತದಾರರು ಸೇರಿ ಒಟ್ಟು 2,71,650 ಮತದಾರರಿದ್ದಾರೆ. ಅದರಲ್ಲಿ 7924 ಯುವ ಮತದಾರರು, 2420 ಜನ 80 ವರ್ಷ ಮೇಲ್ಪಟ್ಟ ವಯಸ್ಕ ಮತದಾರರು, 1530 ವಿಶೇಷ ಚೇತನ ಮತದಾರರಿದ್ದಾರೆ. ನಗರದಲ್ಲಿ ಒಟ್ಟು 261 ಮತಗಟ್ಟೆಗಳಿವೆ.

**ಸಂಡೂರು ಕ್ಷೇತ್ರ:**

95–ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ 1,15,638 ಪುರುಷ ಮತದಾರರು, 1,15,977 ಮಹಿಳೆ ಮತದಾರರು ಮತ್ತು ಇತರೆ 25 ಜನ ಲಿಂಗತ್ವ ಅಲ್ಪಸಂಖ್ಯಾತ ಮತದಾರರು ಒಳಗೊಂಡು ಒಟ್ಟು 2,31,640 ಮತದಾರರಿದ್ದಾರೆ. ಈ ಪೈಕಿ 7,355 ಯುವ ಮತದಾರರು, 1,355 ಜನ ವಯಸ್ಕ ಮತದಾರರು, 2,742 ವಿಶೇಷಚೇತನ ಮತದಾರರಿದ್ದಾರೆ. ಈ ಕ್ಷೇತ್ರದಲ್ಲಿ ಒಟ್ಟು 253 ಮತಗಟ್ಟೆಗಳಿವೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**12–04–2024 – ಶುಕ್ರವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ಸೌಭಾಗ್ಯ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:09:58 |
| ಸೂರ್ಯಾಸ್ತ | : 18:45:31 |
| ರಾಹು | : 10:53–12:28 |
| ಯಮಘಂಡ | : 15:37–17:11 |
| ಗುಳಿಕ | : 07:44–09:19 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 11–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1579.07 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 171 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.034 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.4 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2865 ಕ್ಯುಸೆಕ್ |
| ಸಾಮರ್ಥ್ಯ | 3.338 ಟಿಎಂಸಿ |

# ಮೃತ ಮೈಲಮ್ಮನ ಕುಟುಂಬಕ್ಕೆ 50 ಸಾವಿರ ರೂ. ಪರಿಹಾರ, ಪತಿಗೆ ಸಾಂತ್ವಾನ ಹೇಳಿದ ಸಿಇಒ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ತಾಲೂಕಿನ ಮೋರಗೆರೆಯಲ್ಲಿ ಇತ್ತೀಚಿಗೆ ನಡೆದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕಾಮಗಾರಿ ಸ್ಥಳದಲ್ಲಿ ನಡೆದ ಅವಘಡದ ಹಿನ್ನೆಲೆಯಲ್ಲಿ, ಮೃತರ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ 50 ಸಾವಿರ ರೂ.ಗಳ ಪರಿಹಾರ ಮೊತ್ತವನ್ನು ನೀಡಲಾಯಿತು.

ನರೇಗಾ ಯೋಜನೆಯಲ್ಲಿ ಕೂಲಿಕಾರರಿಗೆ ಕೆಲಸ ನೀಡಲು ಭೂ ಒತ್ತುವರಿ ಸಂಬಂಧಿಸಿದಂತೆ ವಿಷ ಸೇವಿಸಿ ಮೈಲಮ್ಮ ಮೃತರಾಗಿದ್ದು, ಈ ಹಿನ್ನೆಲೆಯಲ್ಲಿ ವಿಜಯನಗರ ಜಿ.ಪಂ. ಮುಖ್ಯಕಾರ್ಯ ನಿರ್ವಾಹಕಾಧಿಕಾರಿ ಸದಾಶಿವ ಪ್ರಭು ಹಾಗೂ ಇತರೆ ಅಧಿಕಾರಿಗಳು ಸೇರಿ ಮೃತರ ಮನೆಗೆ ತೆರಳಿ, ಮೈಲಮ್ಮರ ಪತಿ ಪಕ್ಕೀರಪ್ಪರನ್ನು ಭೇಟಿಮಾಡಿ, ಸಾಂತ್ವಾನ ಹೇಳಿದರು.

ಇದೇ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಜಂಟಿ ನಿರ್ದೇಶಕರಾದ ಎಚ್.ವಿ.ಮಂಜುನಾಥ ಮಾತನಾಡಿ, ಮೃತಪಟ್ಟ ಮೈಲಮ್ಮರ ಅವಲಂಬಿತರಾದ



ಅವರ ಪತಿ ಪಕ್ಕೀರಪ್ಪರ ಖಾತೆಗೆ ಆರ್.ಟಿ.ಜಿ.ಎಸ್ ಮೂಲಕ 50 ಸಾವಿರ ರೂ.ಗಳ ಪರಿಹಾರ ಧನವನ್ನು ಪಾವತಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಉಪ ನಿರ್ದೇಶಕರು ಲಾಳಿ ಭೀಮಪ್ಪ, ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಜಿ.ಪರಮೇಶ್ವರಪ್ಪ, ನರೇಗಾ ಯೋಜನೆಯ ಸಹಾಯಕ ನಿರ್ದೇಶಕರಾದ ರಮೇಶ್ ಮಹಾಲಿಂಗಪುರ್, ಕುಡಿಯುವ ನೀರು ಸರಬರಾಜು ಮಂಡಳಿಯ ಎಇಇ ದೀಪಾ, ಹೊಸಪೇಟೆಯ ಸಿಡಿಪಿಒ ಸಿಂಧು ಅಂಗಡಿ, ಸಮಾಜ ಕಲ್ಯಾಣ ಇಲಾಖೆಯ ತಾಲೂಕು ನಿರ್ದೇಶಕರಾದ ಆಂಜನೇಯ ಹಲ್ಲಾಳ್ ನರೇಗಾ ಮತ್ತು ಗ್ರಾ.ಪಂ.ಯ ಸಿಬ್ಬಂದಿಯವರಿದ್ದರು.

# ಏ.14ಕ್ಕೆ ಗುರುವಂದನಾ, ಸ್ನೇಹ ಸಮ್ಮಿಲನ ಸುವರ್ಣ ಮಹೋತ್ಸವ ಕಾರ್ಯಕ್ರಮ

## ಹಳೆ ವಿದ್ಯಾರ್ಥಿ ಸಮಿತಿ ಅಧ್ಯಕ್ಷ ಡಾ.ರೇವಣಸಿದ್ದಪ್ಪ ಹೇಳಿಕೆ



■ ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಸರ್ಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ 1973,1974 ಮತ್ತು 1975ನೇ ಸಾಲಿನಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಮತ್ತು ಗುರುವಂದನಾ ಹಾಗೂ ಸುವರ್ಣ ಮಹೋತ್ಸವ ಕಾರ್ಯಕ್ರಮ ಏ–14 ಭಾನುವಾರ ವಿಜೃಂಭಣೆಯಿಂದ ನಡೆಯಲಿದ್ದು ಹಳೆಯ ವಿದ್ಯಾರ್ಥಿಗಳು ಸೇರಿದಂತೆ ಪಟ್ಟಣದ ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿ ಸಬೇಕು ಎಂದು ಹಳೆ ವಿದ್ಯಾರ್ಥಿ ಸಮಿತಿಯ ಅಧ್ಯಕ್ಷ ಡಾ.ರೇವಣಸಿದ್ದಪ್ಪ ಕೋರಿದರು.

ಪಟ್ಟಣದ ತುಂಗಭದ್ರಾ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕಾರ್ಯಕ್ರಮವನ್ನು ಸರ್ಕಾರಿ ಬಸ್ ನಿಲ್ದಾಣ ಹಿಂಭಾಗ ಶ್ರೀ ಮರುಳಸಿದ್ದೇಶ್ವರ ಪಂಕ್ಷನ್ ಹಾಲ್ ನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

1973 ರಿಂದ 1975 ವರೆಗೆ ಕಲಿತ ಹಳೆಯ ವಿದ್ಯಾರ್ಥಿಗಳು ಒಟ್ಟು 110ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಗಮಿಸುವ ನಿರೀಕ್ಷೆ ಇದ್ದು, ಉದ್ಘಾಟನೆಯನ್ನು ಸಾಂಕೇತಿಕವಾಗಿ ದೀಪ ಬೆಳಗಿಸಿ, ಬಾಲ್ಯದ ಗುರುಶಿಷ್ಯರ ಸಮ್ಮಿಲನದ ಸ್ಮರಣೆಗೆ ಶಿಕ್ಷಕರಿಂದ ಹಾಜರಿ ಹಾಕುವುದರ ಮೂಲಕ ವಿಶೇಷವಾಗಿ ಉದ್ಘಾಟನೆ ನೆರವೇರಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮ ಮುಗಿದ ಬಳಿಕ 3 ರಿಂದ 5 ಗಂಟೆಯವರೆಗೆ ಹಳೆಯ ವಿದ್ಯಾರ್ಥಿಗಳಿಗೆ ಪ್ರತಿಭಾಕಾರಂಜಿಯನ್ನು ಆಯೋಜಿಸಿದೆ, ಇದು ಹಳೆಯ ವಿದ್ಯಾರ್ಥಿಗಳ ಬಾಲ್ಯದ ಪ್ರತಿಭೆಯನ್ನು ಮೆಲುಕಾಕುವ ಸನ್ನಿವೇಶ ಇಲ್ಲಿ ಮೂಡಿ ಬರಲಿದೆ ಎಂದರು.

ಈ ವೇಳೆ ಸ್ನೇಹ ಸಮ್ಮೇಳನ ಸಮಿತಿಯ ಗೌರವ ಅಧ್ಯಕ್ಷರು ದೊಡ್ಡರಾಮಣ್ಣ, ಉಪಾಧ್ಯಕ್ಷರು ಹನುಮಂತಪ್ಪ, ಕಾರ್ಯದರ್ಶಿ ದೇವರಮನಿ ಚಾಮರಸ, ಗುರುರಾಜ್, ಶೆಟ್ಟಿ ರಾಜಶೇಖರ್, ಕೊಟ್ರೇಶ್, ಅಗಡಿ ರವೀಂದ್ರನಾಥ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ದಿನಗೂಲಿ ಪಾಲಕರ ಸುಪುತ್ರಿ ಭಾಗ್ಯಳಿಗೆ ಪಿಯುಸಿಯಲ್ಲಿ ಶೇ.98.33 ಅಂಕ

ಹಂಪಿ ಟೈಮ್ಸ್ ಹರಪನಹಳ್ಳಿ

ತಾಲೂಕಿನ ಹಗರಿಗಜಾಪುರದ ಜಿ.ಜಿ. ಕರಬಸಪ್ಪ ಮತ್ತು ತಾಯಿ ಕೆ ಎಸ್ ರೇಣುಕಮ್ಮ ದಿನಗೂಲಿಯ ಜೊತೆಗೆ ಹೋಟೆಲ್ ನಡೆಸುತ್ತಾ ಮಗಳ ಓದಿಗೆ ಸಾತ್ ನೀಡಿದ್ದಾರೆ. ಆರ್ಥಿಕ ಅನಾನುಕೂಲದ ನಡುವೆಯೂ ಇವರ ಸುಪುತ್ರಿ ಜಿ.ಕೆ.ಭಾಗ್ಯ ಕೊಟ್ಟೂರಿನ ಇಂದು ಪಿಯು ಕಾಲೇಜಿನ ದ್ವಿತೀಯ ಪಿಯುಸಿಯಲ್ಲಿ 600ಕ್ಕೆ 590 ಅಂಕ ಗಳಿಸಿರುವುದು ( ಕನ್ನಡ–98. ಸಂಸ್ಕೃತ–100. ಐಚ್ಚಿಕ ಕನ್ನಡ –99. ಇತಿಹಾಸ–98. ರಾಜ್ಯಶಾಸ್ತ್ರ–96. ಶಿಕ್ಷಣ ಶಾಸ್ತ್ರ –99.) ಪೋಷಕರು ಸೇರಿದಂತೆ ಗ್ರಾಮಸ್ಥರಲ್ಲಿ ಹರ್ಷ ಮನೆಮಾಡಿದೆ.

ಕಳೆದ ಎರಡು ವರ್ಷಗಳ ಹಿಂದೆ ಇದೇ ಹಗರಿಗಜಾಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೂ ಕೂಡ ತಾನು ಐಎಎಸ್ ಕೆಎಎಸ್ ಆಗಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದ್ದಳು. ಅದರಂತೆ ಹೆಚ್ಚು ಓದಿನಲ್ಲಿ ಆಸಕ್ತಳಾಗಿದ್ದು ಎಸ್ಸೆಸ್ಸೆಲ್ಸಿಯಲ್ಲಿ ಶೇ. 95 ಅಂಕ ಪಡೆದು ಶಾಲೆಗೆ ಮತ್ತು ಊರಿಗೆ ಕೀರ್ತಿಯನ್ನು ತಂದಿದ್ದ ಈ ವಿದ್ಯಾರ್ಥಿನಿ ಈ ಬಾರಿಯೂ ದ್ವಿತೀಯ ಪಿಯುಸಿಯಲ್ಲೂ ಉತ್ತಮ ಅಂಕ ಗಳಿಸುವುದರ ಮೂಲಕ ಮತ್ತೊಮ್ಮೆ ತನ್ನ ಸಾಧನೆಯ ಹಾದಿಗೆ ಬಡತನ ಅಡ್ಡಿಯಲ್ಲ ಎಂದು ಸಾಬೀತು ಮಾಡಿದ್ದಾಳೆ. ಜಿಕೆ ಭಾಗ್ಯಳ ಸಾಧನೆ ಕೈಗೂಡಲಿ ಎಂದು ಊರಿನ ಹಿರಿಯರು ಗಣ್ಯರು ಪೋಷಕರು ಮತ್ತು ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಕರು ಹಾರೈಸಿ, ಹರ್ಷ ವ್ಯಕ್ತಪಡಿಸಿದರು.



ಹರಪನಹಳ್ಳಿ ತಾಲೂಕಿನ ಹಗರಿಗಜಾಪುರದ ಜಿ.ಜಿ. ಕರಬಸಪ್ಪ ಮತ್ತು ತಾಯಿ ಕೆ ಎಸ್ ರೇಣುಕಮ್ಮ ಸುಪುತ್ರಿ ಜಿ.ಕೆ.ಭಾಗ್ಯ ಪಿಯುಸಿಯಲ್ಲಿ ಶೇ.98.33(590) ಅಂಕಗಳಿಸಿದ್ದಾಳೆ. ಪೋಷಕರು ಪುತ್ರಿಗೆ ಸಿಹಿ ತಿನಿಸಿದ ಕ್ಷಣ..

**ಸಾರ್ವತ್ರಿಕ ಲೋಕಸಭಾ ಚುನಾವಣೆ–2024 । ಏಪ್ರಿಲ್ 12 ರಿಂದ 19 ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ : ನಲಿನ್ ಅತುಲ್ ಹೇಳಿಕೆ**

# ನಾಮ ಪತ್ರ ಸಲ್ಲಿಕೆಗೆ ಅಭ್ಯರ್ಥಿ ಸೇರಿ ಐವರಿಗೆ ಅವಕಾಶ

■ ಹಂಪಿ ಟೈಮ್ಸ್ ಕೊಪ್ಪಳ

ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ರ ಹಿನ್ನೆಲೆಯಲ್ಲಿ 8–ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಮೇ 07 ರಂದು ಚುನಾವಣೆ ನಡೆಯಲಿದ್ದು, ಏಪ್ರಿಲ್ 12 ರಿಂದ ಏ.19 ರವರೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆಯಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಭಾರತ ಚುನಾವಣಾ ಆಯೋಗವು ಈಗಾಗಲೇ 2024ರ ಲೋಕಸಭಾ ಚುನಾವಣಾ ವೇಳಾಪಟ್ಟಿಯನ್ನು ನಿಗದಿಪಡಿಸಿದ್ದು, ಅದರಂತೆ ಮಾ.16 ರಿಂದ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಅಧಿಸೂಚನೆ ಹೊರಡಿಸಿದ ಏ.12 ರಿಂದ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಲಿದೆ. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳಿಂದ ನಾಮಪತ್ರ ಸ್ವೀಕರಿಸಲಾಗುವುದು. ನಾಮಪತ್ರ ಸಲ್ಲಿಸಲು ಇಚ್ಛಿಸುವವರು ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ ಏ.12 ರಿಂದ ಏ.19 ರವರೆಗೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಸಲ್ಲಿಸಬಹುದು.

ಏ.20 ರಂದು ಬೆಳಿಗ್ಗೆ 11 ಗಂಟೆಗೆ ನಾಮಪತ್ರಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು. ಏ.22 ರ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರವನ್ನು ವಾಪಸ್ ಪಡೆದುಕೊಳ್ಳಲು ಅವಕಾಶವಿದ್ದು, ನಂತರ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಯ ಹಂಚಿಕೆ ಕಾರ್ಯವನ್ನು ಕೈಗೊಳ್ಳಲಾಗುವುದು. ಮೇ 7 ರಂದು ಮತದಾನ ಹಾಗೂ ಜೂನ್ 4 ರಂದು ಮತ ಎಣಿಕೆ ನಡೆಯಲಿದೆ.

ನಾಮಪತ್ರ ಸಲ್ಲಿಸಲು ಚುನಾವಣಾಧಿಕಾರಿಗಳ ಕೊಠಡಿಗೆ ಅಭ್ಯರ್ಥಿ ಸೇರಿದಂತೆ ಗರಿಷ್ಠ 5 ಜನರಿಗೆ ಮಾತ್ರ ಪ್ರವೇಶಿಸಲು ಅವಕಾಶವಿರುತ್ತದೆ. ಚುನಾವಣಾಧಿಕಾರಿಗಳ ಕಛೇರಿಯ 100 ಮೀಟರ್ ವ್ಯಾಪ್ತಿಯ ಮುಖ್ಯದ್ವಾರದವರೆಗೆ ಉಮೇದುವಾರಿಕೆಯನ್ನು ಸಲ್ಲಿಸುವ ಅಭ್ಯರ್ಥಿಗೆ ಗರಿಷ್ಠ 3 ವಾಹನಗಳನ್ನು ಬಳಕೆ ಮಾಡಲು ಅವಕಾಶವಿರುತ್ತದೆ.

ಚುನಾವಣಾಧಿಕಾರಿಗಳ ಕಛೇರಿಯ ಆವರಣದಲ್ಲಿ ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯ ಮೇರೆಗೆ ಅಭ್ಯರ್ಥಿಗಳ ವಾಹನ ಹಾಗೂ ಅಭ್ಯರ್ಥಿಗಳ ಪ್ರವೇಶಾತಿಯನ್ನು ನಿಯಂತ್ರಿಸಲು ಹಾಗೂ ಜಿಲ್ಲಾಡಳಿತ ಭವನದ ನೌಕರರು/ ಅಧಿಕಾರಿಗಳ ಪ್ರವೇಶಕ್ಕೆ ಮತ್ತು ದೈನಂದಿನ ಕಛೇರಿ ಕೆಲಸಕ್ಕೆ ಆಗಮಿಸುವ ಸಾರ್ವಜನಿಕರಿಗೆ ಕಛೇರಿ ಪ್ರವೇಶಿಸಲು ಪ್ರತ್ಯೇಕವಾದ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.

ಚುನಾವಣಾಧಿಕಾರಿಗಳ ಕಛೇರಿಯ ಆವರಣದಲ್ಲಿ ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಯ ಮೇರೆಗೆ ಅಭ್ಯರ್ಥಿಗಳ ವಾಹನ ಹಾಗೂ ಅಭ್ಯರ್ಥಿಗಳ ಪ್ರವೇಶಾತಿಯನ್ನು ನಿಗಾವಹಿಸಲು ಉಪ ಪೊಲೀಸ್ ಅಧೀಕ್ಷಕರು, ಕೊಪ್ಪಳ ಇವರ ನೇತೃತ್ವದಲ್ಲಿ 2 ವೃತ್ತ ನಿರೀಕ್ಷಕರು, 3 ಸಬ್ ಇನ್ಸ್ಪೆಕ್ಟರ್‌ಗಳು, 5 ಸಹಾಯಕ ಸಬ್ ಇನ್ಸ್ಪೆಕ್ಟರ್‌ಗಳು, ಮಹಿಳಾ ಪೊಲೀಸ್ ಹಾಗೂ ಇನ್ನಿತರೆ ಪೊಲೀಸ್ ಕಾನ್‌ಸ್ಟೇಬಲ್‌ಗಳು, ಗೃಹ ರಕ್ಷದ ದಳದ ಸಿಬ್ಬಂದಿಗಳ ಸೇರಿದಂತೆ ಸುಮಾರು 70 ಜನ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳನ್ನು ಕಾರ್ಯಕ್ಕೆ ನಿಯೋಜನೆ ಮಾಡಲಾಗಿರುತ್ತದೆ ಎಂದು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA